## ನ್ಯಾಯ ಮತ್ತು ಸಬಲೀಕರಣ ಸಚಿವಾಲಯ
## (ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ)
# ಅಧಿಸೂಚನೆ

**ನವದೆಹಲಿ, ಡಿಸೆಂಬರ್ 12, 2013**

ಜಿ.ಎಸ್.ಆರ್ 776 (ಇ) – (ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್)ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ, 2013ರ(2013ರ 25) ಖಂಡ–37ರ ಉಪ–ಖಂಡ (1)ರ ನಿಯಮ (ಎ) ಜೊತೆಗೆ ಓದಿದ ಖಂಡ 36ರ ಉಪ–ಖಂಡಗಳು (1) (2) ರಿಂದ ದೃಢಪಡಿಸಿದ ಅಧಿಕಾರವನ್ನು ಬಳಸಿಕೊಂಡು, ಕೇಂದ್ರ ಸರ್ಕಾರವು ಈ ಮೂಲಕ ಈ ಕೆಳಗಿನ ನಿಯಮಗಳನ್ನು ಮಾಡುತ್ತದೆ:–

## ಅಧ್ಯಾಯ –I
## ಸಾಮಾನ್ಯ

**1. ಕಿರು ಶೀರ್ಷಿಕೆ ಮತ್ತು ಪ್ರಾರಂಭ:–**

(1) ಈ ನಿಯಮಗಳನ್ನು (ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್) ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ, 2013 ಎಂಬುದಾಗಿ ಕರೆಯಬಹುದು.

(2) ಈ ನಿಯಮಗಳು ಅಧಿಕೃತ ಗೆಜೆಟ್‌ನಲ್ಲಿ ಅವುಗಳ ಪ್ರಕಟಣೆಯಾದ ದಿನದಿಂದ ಜಾರಿಗೆ ಬರುತ್ತವೆ.

**2. ವ್ಯಾಖ್ಯಾನಗಳು:**

(1) ಈ ನಿಯಮಗಳಲ್ಲಿ, ಸಂದರ್ಭಕ್ಕೆ ಅಗತ್ಯವಿಲ್ಲದಿರುವುದನ್ನು ಹೊರತುಪಡಿಸಿ:–

(ಎ) "ಕಾಯ್ದೆ" ಅಂದರೆ (ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್)ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ, 2013. (2013ರ 25)

(ಬಿ) "ಸ್ವಚ್ಛಗೊಳಿಸುವ ಸಾಧನ"–ಇದು ನಿಯಮ5ರಲ್ಲಿ ಉಲ್ಲೇಖಿಸಿದ ಆದರೆ ಅಷ್ಟಕ್ಕೇ ಸೀಮಿತವಾಗದ ಉಪಕರಣಗಳನ್ನು ಒಳಗೊಳ್ಳುತ್ತದೆ. ಅವುಗಳು ಮಾನವರಿಂದ ಅಥವಾ ಯಾಂತ್ರಿಕವಾಗಿ ಚಲಾಯಿಸಬಹುದಾದ ಉಪಕರಣಗಳಾಗಿದ್ದು ಅವುಗಳನ್ನು:

i) ಚರಂಡಿಗಳಲ್ಲಿ ಕೊಳಚೆ ನೀರನ್ನು ಹರಿಯುವಂತೆ ಮಾಡಲು ಅಥವಾ ಸಾಗಣೆ ಮಾಡಲು ಅಥವಾ ಒಳಚರಂಡಿಗಳನ್ನು ಸ್ವಚ್ಛಗೊಳಿಸಲು ಅಥವಾ ಹೊಲಸುಗುಂಡಿಗಳನ್ನು ಸ್ವಚ್ಛಗೊಳಿಸಲು ಬಳಸಬಹುದು ಮತ್ತು

(ii) ಅಂತಹ ಕೊಳಚೆ ಅಥವಾ ವಸ್ತುಗಳನ್ನು ನೇರವಾಗಿ ಕೈಯಿಂದ ಮುಟ್ಟುವುದನ್ನು ತಪ್ಪಿಸಲು ಬಳಸಬಹುದು.

(ಸಿ) "ಜಿಲ್ಲಾ ಮಟ್ಟದ ಸಮೀಕ್ಷಾ ಸಮಿತಿ" ಅಂದರೆ ಈ ಕೆಳಗಿನ ಸಂಯೋಜನೆಯೊಂದಿಗೆ ನಿಯಮ 11 (2), 11 (18) ಮತ್ತು 11 (19) ರಲ್ಲಿ ಉಲ್ಲೇಖಿಸಿದ ಸಮಿತಿಯಾಗಿದೆ: –

| | | |
|---|---|---|
| 1. | ಜಿಲ್ಲಾ ಮ್ಯಾಜಿಸ್ಟ್ರೇಟ್/ ನ್ಯಾಯಾಧೀಶರು | – ಚೇರ್ಮನ್/ ಅಧ್ಯಕ್ಷರು |
| 2. | ಪರಿಶಿಷ್ಟ ಜಾತಿಗಳ ವ್ಯವಹಾರಗಳನ್ನು ನೋಡಿಕೊಳ್ಳುವ ಜಿಲ್ಲಾಮಟ್ಟದ ಅಧಿಕಾರಿ | – ಸದಸ್ಯ ಕಾರ್ಯದರ್ಶಿ |
| 3. | ಜಿಲ್ಲಾ ಸಾಂಖ್ಯಿಕ ಅಧಿಕಾರಿ | – ಸದಸ್ಯರು |
| 4. | ನಗರಾಭಿವೃದ್ಧಿ ಇಲಾಖೆ/ ಸ್ಥಳೀಯ ಸ್ವಯಂ ಸರಕಾರಿ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿ | – ಸದಸ್ಯರು |
| 5. | ರೈಲು ಪ್ರಾಧಿಕಾರದಿಂದ ಒಬ್ಬ ಪ್ರತಿನಿಧಿ | – ಸದಸ್ಯರು |
| 6. | (ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ)ಗಳ ಮತ್ತು ಸಫಾಯಿ ಕರ್ಮಚಾರಿಗಳ ಕಲ್ಯಾಣಕ್ಕಾಗಿ ಕೆಲಸ ಮಾಡುವ ಸರಕಾರೇತರ ಸಂಸ್ಥೆಗಳಿಂದ (ಎನ್.ಜಿ.ಓ) ಜಿಲ್ಲಾ ನ್ಯಾಯಾಧೀಶರು ನಾಮನಿರ್ದೇಶನ ಮಾಡುವ ಗರಿಷ್ಟ ಇಬ್ಬರು ಪ್ರತಿನಿಧಿಗಳು | – ಸದಸ್ಯರು |
| 7. | ಗರಿಷ್ಠ ಇಬ್ಬರು ಸಮುದಾಯ ಪ್ರತಿನಿಧಿಗಳು, ಇವರಲ್ಲಿ ಒಬ್ಬರು ಮಹಿಳಾ ಪ್ರತಿನಿಧಿಯಾಗಿದ್ದು, ಅವರನ್ನು ಜಿಲ್ಲಾ ನ್ಯಾಯಾಧೀಶರು ನಾಮನಿರ್ದೇಶನ ಮಾಡಬೇಕು | – ಸದಸ್ಯರು |

## ಜಿಲ್ಲಾಮಟ್ಟದ ಸಮೀಕ್ಷಾ ಸಮಿತಿಯ ಕಾರ್ಯಗಳು:

ಎ) ಜಿಲ್ಲಾಮಟ್ಟದಲ್ಲಿ ಸಮೀಕ್ಷಾ ಪ್ರಕ್ರಿಯೆಯ ಉಸ್ತುವಾರಿ ಮತ್ತು ಮೇಲ್ವಿಚಾರಣೆ ಮಾಡುವುದು.

ಬಿ) ಜಾಗೃತಿ ಪ್ರಚಾರಕ್ಕಾಗಿ ಸಾಮಗ್ರಿಗಳನ್ನು ಗೊತ್ತುಪಡಿಸಿದ ಸ್ಥಳಕ್ಕೆ ವಿತರಿಸುವುದು.

ಸಿ) ಸಮೀಕ್ಷೆಯ ಕುರಿತು ಸ್ಥಳೀಯ ವೃತ್ತಪತ್ರಿಕೆಗಳು, ಮುಂತಾದವುಗಳ ಮೂಲಕ ಪ್ರಚಾರಕ್ಕೆ ವ್ಯವಸ್ಥೆ ಮಾಡುವುದು.

ಡಿ) ಭಾಷಾಂತರಿಸಿದ ಸಮೀಕ್ಷಾ ಸಾಮಗ್ರಿಗಳನ್ನು ತನ್ನ ಕಾರ್ಯವ್ಯಾಪ್ತಿಗೆ ಬರುವ ಪ್ರದೇಶದಲ್ಲಿ ಗೊತ್ತುಪಡಿಸಿದ ಸ್ಥಳಕ್ಕೆ ವಿತರಿಸುವುದು.

ಇ) ಜಿಲ್ಲೆಯ ಎಲ್ಲಾ ಪಟ್ಟಣಗಳು, ನಗರಗಳು ಮತ್ತು ಗ್ರಾಮಗಳಿಗೆ (ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್)ಗಳ ಅಂತಿಮಪಟ್ಟಿಯನ್ನು ಅನುಮೋದಿಸುವುದು.

ಎಫ್) ಜಿಲ್ಲೆಯಲ್ಲಿರುವ (ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್)ಗಳ ಅಂತಿಮ ಕ್ರೋಢೀಕರಿಸಿದ ಪಟ್ಟಿಯನ್ನು ಪ್ರಕಟಿಸುವುದು.

ಜಿ) "ಎಣಿಕೆಗಾರ (ಎನ್ಯುಮರೇಟರ್)" ಅಂದರೆ (ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್)ಗಳ ಸಮೀಕ್ಷೆ ಅಥವಾ ಪರಿಶೀಲನೆಗಾಗಿ ಸ್ಥಳೀಯ ಪ್ರಾಧಿಕಾರದಿಂದ ನೇಮಿಸಲ್ಪಟ್ಟ ಯಾವುದೇ ವ್ಯಕ್ತಿ ಎಂದರ್ಥ.

ಹೆಚ್) "ಪರೀಕ್ಷಕ (ಇನ್ಸ್‌ಪೆಕ್ಟರ್)" ಅಂದರೆ ಸೂಕ್ತ ಸರಕಾರದಿಂದ ಕಾಯ್ದೆಯ ಖಂಡ 20ರ ಉಪ ಖಂಡ (1) ನಿಬಂಧನೆಗಳ ಪ್ರಕಾರ "ಪರೀಕ್ಷಕ" ಎಂದು ನೇಮಕಗೊಂಡ ಒಬ್ಬ ವ್ಯಕ್ತಿ.

(ಐ) "ಮೇಲ್ವಿಚಾರಕ (ಓವರ್ಸಿಯರ್)" ಎಂದರೆ ಈ ನಿಯಮಗಳ ಅನುಸಾರವಾಗಿ ಅಧಿಕಾರವನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಸ್ಥಳೀಯ ಅಧಿಕಾರದಿಂದ ನೇಮಿಸಲ್ಪಟ್ಟಿರುವ ಒಬ್ಬ ಅಧಿಕಾರಿ.

(ಜೆ) "ಸುರಕ್ಷಾ ಕವಚ" ಎಂದರೆ ಚರಂಡಿಗಳು ಮತ್ತು ರೊಚ್ಚು ತೊಟ್ಟಿ (ಸೆಪ್ಟಿಕ್ ಟ್ಯಾಂಕ್)ಗಳನ್ನು ಸ್ವಚ್ಛಗೊಳಿಸುವ ವಿಷಯದಲ್ಲಿ ಕೆಲಸದ ನಿರ್ದಿಷ್ಟ ಸ್ವರೂಪಕ್ಕೆ ಅಗತ್ಯವಾದವುಗಳನ್ನು ಸಫಾಯಿ ಕರ್ಮಚಾರಿಗಳು ಅಥವಾ ನೈರ್ಮಲ್ಯ ಕಾರ್ಯಕರ್ತರಿಗೆ ಒದಗಿಸಬೇಕಾದ, ಅವರು ಧರಿಸಬೇಕಾದ ಅಥವಾ ಬಳಸಬೇಕಾದ ವೈಯಕ್ತಿಕ ಸುರಕ್ಷತಾ ಕವಚ ಮತ್ತು ಸುರಕ್ಷತೆಯ ಸಾಧನಗಳು. ಈ ಸಾಧನಗಳು ನಿಯಮ–4 ರಲ್ಲಿ ಉಲ್ಲೇಖಿಸಲ್ಪಟ್ಟಿರುವ ಮತ್ತು ಅದಕ್ಕೆ ಸೀಮಿತವಾಗಿಲ್ಲದ ಪರಿಕರಗಳನ್ನು ಒಳಗೊಂಡಿದ್ದು ಅವುಗಳು –

(i) ಕಾಯಿಲೆಗೆ ಕಾರಣವಾಗುವ ಅನಿಲಗಳ ಉಸಿರಾಟವನ್ನು ತಡೆಗಟ್ಟುವ ಉಸಿರಾಟದ ಎಲ್ಲಾ ಉಪಕರಣಗಳ ಜೊತೆಗೆ, ರೋಗಗಳಿಗೆ ಕಾರಣವಾಗುವಂತಹ ವಸ್ತುಗಳಿಗೆ ಮಾನವ ಚರ್ಮವನ್ನು ಯಾವುದೇ ರೀತಿಯಲ್ಲಿ ಒಡ್ಡಿಕೊಳ್ಳುವುದನ್ನು ತಪ್ಪಿಸಲು ಮತ್ತು ಒಳಚರಂಡಿಗಳ ಅಥವಾ ಸೆಪ್ಟಿಕ್‌ಟ್ಯಾಂಕ್‌ಗಳಲ್ಲಿರುವ ಅನಿಲಗಳ ಬಗ್ಗೆ ತಿಳಿಯಲು ಬಳಸುವ ಯಾವುದೇ ಸಂವೇದನಾ ಉಪಕರಣಗಳನ್ನು ಸಹ ಒಳಗೊಂಡಿದೆ ;

(ii) ಸ್ವಚ್ಛಗೊಳಿಸುವ ಕೆಲಸವನ್ನು ನಿರ್ವಹಿಸುವಾಗ ಯಾವುದೇ ಗಾಯಗಳನ್ನು ತಪ್ಪಿಸಲು ಬಳಸುವ ಉಪಕರಣಗಳನ್ನು ಕೂಡಾ ಒಳಗೊಳ್ಳುತ್ತದೆ.

(ಕೆ) "ಸಫಾಯಿ ಕರ್ಮಚಾರಿ" ಅಥವಾ "ನೈರ್ಮಲ್ಯ ಕಾರ್ಯಕರ್ತ (ಸ್ಯಾನಿಟರಿ ವರ್ಕರ್)" ಅಂದರೆ ಮನೆಕೆಲಸವನ್ನು ಹೊರತುಪಡಿಸಿ, ಯಾವುದೇ ನೈರ್ಮಲ್ಯ ಕೆಲಸದಲ್ಲಿ ತೊಡಗಿರುವ ಅಥವಾ ಅಂತಹ ಕೆಲಸಕ್ಕೆ ನೇಮಕಗೊಂಡಿರುವ ಯಾವುದೇ ವ್ಯಕ್ತಿ;

(ಎಲ್) "ಸುರಕ್ಷತಾ ಮುನ್ನೆಚ್ಚರಿಕೆಗಳು"–ಅಂದರೆ ನಿಯಮ–6ರಲ್ಲಿ ಉಲ್ಲೇಖಿಸಲಾದ ಮತ್ತು ಅದಕ್ಕೆ ಸೀಮಿತಗೊಳ್ಳದ ಮುನ್ನೆಚ್ಚರಿಕೆಗಳನ್ನು ಒಳಗೊಂಡಿರುತ್ತದೆ ಮತ್ತು ಚರಂಡಿ ಮತ್ತು ರೊಚ್ಚು ತೊಟ್ಟಿಗಳನ್ನು ಪ್ರವೇಶಿಸುವ ಸಂದರ್ಭದಲ್ಲಿ ಹಾಗೂ ಸ್ವಚ್ಛಗೊಳಿಸುವ ಸಮಯದಲ್ಲಿ ಕೊಳಚೆ ನೀರು ಅಥವಾ ಯಾವುದೇ ಭೌತಿಕ ಸ್ಥಿತಿಯಲ್ಲಿರುವ ಯಾವುದೇ ಇತರ ವಸ್ತು(ಘನ, ದ್ರವ ಅಥವಾ ಅನಿಲ)ಗಳಿಂದ ಕೆಲಸ ಮಾಡುವ ವ್ಯಕ್ತಿಗಳಿಗೆ ಅಪಾಯವನ್ನು ಕಡಿಮೆ ಮಾಡಲು ಅಗತ್ಯವಿರುವ ಎಲ್ಲಾ ಮುಂಜಾಗೃತಾ ಕ್ರಮಗಳನ್ನು ಒಳಗೊಳ್ಳುತ್ತದೆ

(ಎಮ್) "ರಾಜ್ಯ ಮಟ್ಟದ ಸಮೀಕ್ಷಾ ಸಮಿತಿ" ಅಂದರೆ ಕೆಳಗಿನ ಸಂಯೋಜನೆಯೊಂದಿಗೆ ನಿಯಮಗಳು 10 (12), 10 (13) ಮತ್ತು 11 (2)ರಲ್ಲಿ ಉಲ್ಲೇಖಿಸಲಾದ ಸಮಿತಿಯಾಗಿದೆ:–

| | | |
|---|---|---|
| 1. | ರಾಜ್ಯ ಸರ್ಕಾರದಿಂದ ನಾಮನಿರ್ದೇಶನ ಮಾಡುವ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ | – ಚೇರ್ಮನ್/ ಅಧ್ಯಕ್ಷರು |
| 2. | ಸಮಿತಿಗೆ ಅಪರ ಮುಖ್ಯ ಕಾರ್ಯದರ್ಶಿಯವರರು ಅಧ್ಯಕ್ಷರಾಗಿದ್ದರೆ, ಮುಖ್ಯ ಕಾರ್ಯದರ್ಶಿ/ ಪರಿಶಿಷ್ಟ ಜಾತಿಗಳ ಕುರಿತು ಕಾರ್ಯನಿರ್ವಹಿಸುತ್ತಿರುವ ಕಾರ್ಯದರ್ಶಿ; ಪರಿಶಿಷ್ಟ ಜಾತಿ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಯವರು ಸ್ವತಃ ಅಧ್ಯಕ್ಷರಾಗಿದ್ದಲ್ಲಿ, ಪರಿಶಿಷ್ಟ ಜಾಆತಿ ಕಲ್ಯಾಣ ಇಲಾಖೆಯ ನಿರ್ದೇಶಕರು | – ಸದಸ್ಯ ಕಾರ್ಯದರ್ಶಿ |
| 3. | ನಿರ್ದೇಶಕರು, ಅರ್ಥಶಾಸ್ತ್ರ ಮತ್ತು ಸಾಂಖ್ಯಿಕ ಇಲಾಖೆ | – ಸದಸ್ಯರು |
| 4. | ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ/ ಸ್ಥಳೀಯ ಸ್ವಯಂ ಅಭಿವೃದ್ಧಿ ಇಲಾಖೆ | – ಸದಸ್ಯರು |
| 5. | ಪ್ರಾದೇಶಿಕ ನಿರ್ದೇಶಕರು, ಜನಗಣತಿ ಕಾರ್ಯಾಚರಣೆ | – ಸದಸ್ಯರು |
| 6. | ರೈಲು ಪ್ರಾಧಿಕಾರದಿಂದ ಒಬ್ಬ ಪ್ರತಿನಿಧಿ | – ಸದಸ್ಯರು |
| 7. | ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಮತ್ತು ಸಫಾಯಿ ಕರ್ಮಚಾರಿಗಳ ಕಲ್ಯಾಣಕ್ಕಾಗಿ ಕಾರ್ಯನಿರ್ವಹಿಸುವ ಸರಕಾರೇತರ ಸಂಸ್ಥೆಗಳಿಂದ ರಾಜ್ಯ ಸರ್ಕಾರದ ಮೂಲಕ ನಾಮನಿರ್ದೇಶನಗೊಂಡ ಗರಿಷ್ಠ ಇಬ್ಬರು ಪ್ರತಿನಿಧಿಗಳು | – ಸದಸ್ಯರು |
| 8. | ಗರಿಷ್ಠ ಇಬ್ಬರು ಸಮುದಾಯ ಪ್ರತಿನಿಧಿಗಳು, ಇವರಲ್ಲಿ ಒಬ್ಬರು ಮಹಿಳಾ ಪ್ರತಿನಿಧಿಯಾಗಿದ್ದು ಸರಕಾರದಿಂದ ನಾಮನಿರ್ದೇಶನಗೊಂಡಿರಬೇಕು | – ಸದಸ್ಯರು |

## ರಾಜ್ಯಮಟ್ಟದ ಸಮೀಕ್ಷಾ ಸಮಿತಿಯ ಕಾರ್ಯಗಳು:

ಎ) ರಾಜ್ಯಮಟ್ಟದಲ್ಲಿ ಸಮೀಕ್ಷಾ ಪ್ರಕ್ರಿಯೆಯ ಉಸ್ತುವಾರಿ ಮತ್ತು ಮೇಲ್ವಿಚಾರಣೆ ಮಾಡುವುದು.

ಬಿ) ಜಾಗೃತಿ ಪ್ರಚಾರಕ್ಕಾಗಿ ಸಾಮಗ್ರಿಗಳನ್ನು ಗೊತ್ತುಪಡಿಸಿದ ಸ್ಥಳಕ್ಕೆ ವಿತರಿಸುವುದು.

ಸಿ) ಸಮೀಕ್ಷೆಯ ಕುರಿತು ಸ್ಥಳೀಯ ವೃತ್ತಪತ್ರಿಕೆಗಳ, ಮುಂತಾದವುಗಳ ಮೂಲಕ ಪ್ರಚಾರಕ್ಕೆ ವ್ಯವಸ್ಥೆ ಮಾಡುವುದು.

ಡಿ) ಭಾಷಾಂತರಿಸಿದ ಸಮೀಕ್ಷಾ ಸಾಮಗ್ರಿಗಳನ್ನು ತನ್ನ ಕಾರ್ಯವ್ಯಾಪ್ತಿಗೆ ಬರುವ ಪ್ರದೇಶದಲ್ಲಿ ಗೊತ್ತುಪಡಿಸಿದ ಸ್ಥಳಕ್ಕೆ ವಿತರಿಸುವುದು.

ಇ) ರಾಜ್ಯದ ಎಲ್ಲಾ ಪಟ್ಟಣಗಳು, ನಗರಗಳು ಮತ್ತು ಗ್ರಾಮಗಳಿಗೆ (ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್)ಗಳ ಅಂತಿಮಪಟ್ಟಿಯನ್ನು ಅನುಮೋದಿಸುವುದು.

ಎಫ್) ರಾಜ್ಯದಲ್ಲಿರುವ (ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್) ಗಳ ಅಂತಿಮ ಕ್ರೋಢೀಕರಿಸಿದ ಪಟ್ಟಿಯನ್ನು ಪ್ರಕಟಿಸುವುದು.

(2) ಈ ನಿಯಮಗಳಲ್ಲಿ ಬಳಸಿದ ಆದರೆ ವ್ಯಾಖ್ಯಾನಿಸದ, ಆದರೆ ಕಾಯ್ದೆಯಲ್ಲಿ ವ್ಯಾಖ್ಯಾನಿಸಿದ ಪದಗಳು ಮತ್ತು ಅಭಿವ್ಯಕ್ತಿಗಳು, ಕಾಯ್ದೆಯಲ್ಲಿ ಕೊಟ್ಟಿರುವ ಅರ್ಥವನ್ನೇ ಹೊಂದುತ್ತವೆ.

# ಅಧ್ಯಾಯ –II

## ಒಳಚರಂಡಿ ಅಥವಾ ರೊಚ್ಚುಗುಂಡಿ (ಸೆಪ್ಟಿಕ್ ಟ್ಯಾಂಕ್)ಗಳನ್ನು ಸ್ವಚ್ಛಗೊಳಿಸುವ ನೌಕರರಿಗೆ ಸಂಬಂಧಿಸಿದಂತೆ ಉದ್ಯೋಗದಾತರ ಹೊಣೆಗಾರಿಕೆಗಳು

**3**. (1) ಈ ನಿಯಮಗಳ ಅಡಿಯಲ್ಲಿ ಕೆಳಗಿನ ಸಂದರ್ಭಗಳನ್ನು ಹೊರತುಪಡಿಸಿ, ರಕ್ಷಣಾತ್ಮಕ ಕವಚ ಮತ್ತು ಸುರಕ್ಷತಾ ಸಾಧನಗಳೊಂದಿಗೆ ಕೈಯಾರೆ ಚರಂಡಿಯನ್ನು ಸ್ವಚ್ಛಗೊಳಿಸಲು ಯಾವುದೇ ವ್ಯಕ್ತಿಯನ್ನು ಅನುಮತಿಸಬಾರದು: –

ಎ) ಕಾಂಕ್ರೀಟ್ ಅಥವಾ ಎಫ್‌ಆರ್‌ಪಿ (ಫೈಬರ್ ರಿಯಿನ್ಫೋರ್ಸ್ಡ್ ಪ್ಲಾಸ್ಟಿಕ್)ನ್ನು ತೆಗೆಯುವುದಕ್ಕಾಗಿ ಅಥವಾ ಒಳಚರಂಡಿ (ಮ್ಯಾನ್‌ಹೋಲ್) ದ್ವಾರ ಹಾನಿಗೊಳಗಾಗಿದ್ದು ಯಾಂತ್ರಿಕ ಸಲಕರಣೆಗಳನ್ನು ಕಾರ್ಯಾಚರಣೆಯಲ್ಲಿ ಬಳಸಲಾಗದ ಸಂದರ್ಭಗಳಲ್ಲಿ.

ಬಿ) 300 ಮಿ.ಮೀ ವ್ಯಾಸಕ್ಕಿಂತಲೂ ಹೆಚ್ಚು ಗಾತ್ರದ ಒಳಚರಂಡಿ ಪೈಪ್‌ಗಳು ಇದ್ದಾಗ, ಹೊಸದಾಗಿ ಇರಿಸಲಾದ ಒಳಚರಂಡಿ ಕೊಳವೆಯನ್ನು ಮುಖ್ಯ ಕೊಳವೆಯೊಂದಿಗೆ ಜೋಡಿಸಲು (ಇಂಟರ್–ಲಿಂಕ್ ಮಾಡುವುದು).

ಸಿ) ಸೆಕ್ಷನ್ ಬಾವಿಗಳ ತಳದಲ್ಲಿ ಸ್ಥಾಪಿಸಲಾದ ಸಬ್‌ಮರ್ಸಿಬಲ್ ಪಂಪ್‌ಸೆಟ್‌ಗಳನ್ನು ತೆಗೆಯಲು.

ಡಿ) ಮ್ಯಾನ್‌ಹೋಲ್‌ಗಳ ಮರುನಿರ್ಮಾಣ ಅಥವಾ ಒಳಚರಂಡಿ ಮುಖ್ಯ ಲೈನನ್ನು ಸರಿಪಡಿಸಲು.

ಇ) ಯಾವುದೇ ಸಂದರ್ಭದಲ್ಲಿ ನಿರ್ದಿಷ್ಟ ಮಾನ್ಯ ಕಾರಣಗಳಿಗಾಗಿ ಕೈಯಾರೆ ಸ್ವಚ್ಛಗೊಳಿಸುವುದು ಖಂಡಿತವಾಗಿಯೂ ಅಗತ್ಯ ಎಂದು ಸ್ಥಳೀಯ ಪ್ರಾಧಿಕಾರದ ಸಿಇಒ ಅಂತಹ ಶುಚಿಗೊಳಿಸುವಿಕೆಯನ್ನು ಲಿಖಿತ ರೂಪದಲ್ಲಿ ಅನುಮತಿಸಿದ ನಂತರ.

(2) ಒಳಚರಂಡಿಗೆ ವ್ಯಕ್ತಿಯ ಪ್ರವೇಶವನ್ನು ಅನುಮತಿಸುವ ಮೊದಲು ಉಪ–ನಿಯಮ (1) ನ ವಿಧಿಗಳು (ಸಿ) ಮತ್ತು (ಡಿ) ಉದ್ದೇಶಕ್ಕಾಗಿ, ಕೊಳಚೆನೀರನ್ನು ಸಂಪೂರ್ಣವಾಗಿ ಖಾಲಿ ಮಾಡಬೇಕು.

**4.** ಒಳಚರಂಡಿ ಅಥವಾ ಸೆಪ್ಟಿಕ್‌ಟ್ಯಾಂಕ್ ಅನ್ನು ಸ್ವಚ್ಛಗೊಳಿಸಲು ನೇಮಕ ಮಾಡಿದ ಯಾವುದೇ ವ್ಯಕ್ತಿಗೆ ಆತನ ಉದ್ಯೋಗದಾತನು, ಈ ಕೆಳಗಿನ, ಆದರೆ ಅಷ್ಟಕ್ಕೆ ಸೀಮಿತವಾಗದ, ರಕ್ಷಣಾತ್ಮಕ ಕವಚ ಮತ್ತು ಸುರಕ್ಷತಾ ಸಾಧನಗಳನ್ನು ಒದಗಿಸಬೇಕು: –

(i) ಬ್ಲೋವರ್‌ಗೆ ಏರ್‌ಕಂಪ್ರೆಸ್ಸರ್

(ii) ಏರ್‌ಲೈನ್ ಉಸಿರಾಟದ ಉಪಕರಣ

(III) ಹಸ್ತಚಾಲಿತವಾಗಿ ಕಾರ್ಯನಿರ್ವಹಿಸುವ ಏರ್‌ಬ್ಲೋವರ್‌ನೊಂದಿಗೆ ಏರ್ ಲೈನ್ ಶ್ವಾಸಕ (ರೆಸ್ಪಿರೇಟರ್)

(iv) ಏರ್ ಪ್ಯೂರಿಫೈಯರ್ ಗ್ಯಾಸ್ ಮಾಸ್ಕ್ / ಚಿನ್ ಕಾರ್ಟ್ರಿಜ್.

(v) ಕೃತಕ ಉಸಿರಾಟ ಉಪಕರಣ / ಜಾಲಬಂಧ (ರೆಟಿಕ್ಯುಲೇಟ್)

(VI) ತಡೆಗೋಡೆ ಎಚ್ಚರಿಕೆಯ ಟೇಪ್

(vii) ಬ್ಯಾರಿಯರ್ ಕ್ರೀಮ್

(viii) ಬ್ಯಾರಿಯರ್ ಕೋನ್

(ix) ಬ್ಲೋವರ್

(X) ಉಸಿರಾಟದ ಮುಖವಾಡ

(XI) ಉಸಿರಾಟದ ಉಪಕರಣಗಳು

(xii) ಎಚ್ಚರಿಕೆ ಫಲಕ

(xiii) ಕ್ಲೋರಿನ್ ಮುಖವಾಡ

(xiv) ತುರ್ತು ವೈದ್ಯಕೀಯ ಆಮ್ಲಜನಕ ಪುನರಾವರ್ತಕ ಕಿಟ್

(xv) ಪ್ರಥಮ ಚಿಕಿತ್ಸಾ ಪೆಟ್ಟಿಗೆ

(xvi) ಫೇಸ್ ಮಾಸ್ಕ್

(xvii) ಗ್ಯಾಸ್ ಮಾನಿಟರ್ (4 ಗ್ಯಾಸ್‌ಗಳು)

(xviii) ಗೈಡ್ ಪೈಪ್‌ಸೆಟ್

(xix) ಪೂರ್ಣ ದೇಹ ಮುಚ್ಚುವ ವೇಡರ್ ಸೂಟ್

(xx) ಬೂಟುಗಳೊಂದಿಗೆ ಜೋಡಿಸಲಾದ ಮೀನುಗಾರಿಕೆಯ ವೇಡರ್ ಸೂಟ್

(xxi) ಕೈಗವಸುಗಳು (ಹ್ಯಾಂಡ್ ಗ್ಲೋವ್ಸ್)

(xxii) ಹೆಡ್ ಲ್ಯಾಂಪ್

(xxiii) ಶಿರಸ್ತ್ರಾಣ (ಹೆಲ್ಮೆಟ್)

(xxiv) ಹೆಲ್ಮೆಟ್ ಡಿಮೋಲಿಶಿಂಗ್

(xxv) ಸೀಸದ ಅಸಿಟೇಟ್ ಕಾಗದ

(xxvi) ಲೈಫ್ ಗಾರ್ಡ್ ಪ್ಯಾಡ್

(xxvii) ಮಾಡ್ಯುಲರ್ ಏರ್ಲೈನ್ಸ್ ಸಪ್ಲೈ ಟ್ರಾಲಿ ಸಿಸ್ಟಮ್

(xxviii) ಸಾಮಾನ್ಯ ಮುಖವಾಡ

(xxix) 5 ಮೀಟರ್ ಉದ್ದದ ನೈಲಾನ್ ಹಗ್ಗದ ಏಣಿ

(xxx) ನೈಲಾನ್ ಸುರಕ್ಷತಾ ಬೆಲ್ಟ್

(xxxi) ಪಾಕೆಟ್ ಪುಸ್ತಕ

(xxxii) ಪೋರ್ಟ್ ಆಕ್ಸಿ

(xxxiii) ರೈನ್ ಕೋಟ್

(xxxiv) ಪ್ರತಿಫಲಿಸುವ ಜಾಕೆಟ್

(xxxv) ಸುರಕ್ಷತಾ ಬೆಲ್ಟ್

(xxxvi) ದೇಹದ ಸುರಕ್ಷತೆಯ ಉಡುಪು

(xxxvii) ದೇಹದ ಸುರಕ್ಷತೆಯ ಸರಂಜಾಮು

(xxxviii) ಸುರಕ್ಷತಾ ಕನ್ನಡಕಗಳು

(xxxix) ಸುರಕ್ಷತಾ ಗಮ್‌ಬೂಟುಗಳು

(xl) ಸುರಕ್ಷತಾ ಶಿರಸ್ತ್ರಾಣ (ಹೆಲ್ಮೆಟ್)

(xli) ಸುರಕ್ಷತಾ ಶವರ್ಸ್

(xlii) ಸುರಕ್ಷತಾ ಟಾರ್ಚ್

(xliii) ಸುರಕ್ಷತಾ ಟ್ರೈಪಾಡ್ ಸೆಟ್

(xliv) ಸರ್ಚ್ ಲೈಟ್

**5**. ಕೆಳಗೆ ಕೊಟ್ಟಿರುವ ಶುಚಿಗೊಳಿಸುವ, ಆದರೆ ಅಷ್ಟಕ್ಕೇ ಸೀಮಿತವಾಗದ ಸಾಧನಗಳನ್ನು ಒಳಚರಂಡಿ ಅಥವಾ ಸೆಪ್ಟಿಕ್‌ತೊಟ್ಟಿಗಳನ್ನು ಸ್ವಚ್ಛಗೊಳಿಸುವ ಕೆಲಸದಲ್ಲಿ ತೊಡಗಿಸಿಕೊಂಡಿರುವವರು ಬಳಸುತ್ತಿದ್ದಾರೆಂದು ಸ್ಥಳೀಯ ಅಧಿಕಾರ ವರ್ಗವು ಖಾತ್ರಿಪಡಿಸತಕ್ಕದ್ದು:

(I) ಒಳಚರಂಡಿ ಲೈನ್ ಕ್ಲೀನಿಂಗ್ ಬಕೆಟಿಂಗ್ ಮೆಷಿನ್

(II) ಜೆಟ್ಟಿಂಗ್ ಮೆಷಿನ್

(III) ಸೆಕ್ಷನ್ ಮೆಷಿನ್ (ಗುಲ್ಲಿ ಎಂಪ್ಟಿಯರ್)

(iv) ಕಂಬೈನ್ಡ್ ಮೆಷಿನ್ (ಜೆಟ್ಟಿಂಗ್ ಕಮ್ ಸಕ್ಷನ್)

(v) ಡೀಪ್ ಸಕ್ಷನ್ ಕಂಬೈನ್ಡ್ ಮೆಷಿನ್ (ಜೆಟ್ಟಿಂಗ್ ಕಮ್ ಸಕ್ಷನ್ ಮೆಷೀನ್)

(vi) ಮ್ಯಾನ್ಯುಯಲ್ ಹ್ಯಾಂಡ್ ಆಪರೇಟೆಡ್ ಗ್ರ್ಯಾಬ್ ಬಕೆಟ್

(vii) ಹೈಡ್ರಾಲಿಕ್ ಆಪರೇಟೆಡ್ ಟ್ರಾಲಿ ಮೌಂಟೆಡ್ ಗ್ರ್ಯಾಬ್ ಬಕೆಟ್

(ix) ಫಿಕ್ಸೆಡ್ ಸ್ಟ್ರಕ್ಚರ್ ಮೌಂಟೆಡ್ ಮೋಟಾರ್ ಮತ್ತು ವಿಂಚ್ ಒಪರೇಟೆಡ್ ಗ್ರ್ಯಾಬ್ ಬಕೆಟ್ ಮೆಷಿನ್

(X) ವೆಟ್ ವೆಲ್‌ಗೆ ರಿಕ್ಷಾ ಮೌಂಟೆಡ್ ವಿಂಚ್ ಮತ್ತು ಮೋಟರ್ ಆಪರೇಟೆಡ್ ಡಿಸಾಲ್ಟಿಂಗ್ ಯಂತ್ರ.

(xi) ಮ್ಯಾನ್‌ಹೋಲ್‌ಗೆ ರಿಕ್ಷಾ ಮೌಂಟೆಡ್ ವಿಂಚ್ ಮತ್ತು ಆಕ್ಸಿಲಿಯರಿ ಇಂಜಿನ್ ಆಪರೇಟೆಡ್ ಡಿಸಾಲ್ಟಿಂಗ್ ಯಂತ್ರ.

(xii) ಎಸ್ಕಾರ್ಟ್ ಹೈಡ್ರಾ ಕ್ರೇನ್ ಮೌಂಟೆಡ್ ಹೈಡ್ರಾಲಿಕ್ ವಿಂಚ್ ಒಪರೇಟೆಡ್ ಗ್ರ್ಯಾಬ್ ಬಕೆಟ್ ಡಿಸಾಲ್ಟಿಂಗ್ ಮೆಷಿನ್.

(xiii) ಮ್ಯಾನ್ಯುಯಲ್ ರಾಡ್‌ಗಳು, ಸಲಿಕೆಗಳು, ಸ್ಪೇಡ್ಸ್, ಒಳಚರಂಡಿ ಸ್ವಚ್ಛಗೊಳಿಸುವ ಯಂತ್ರಗಳು ಮತ್ತು ಹಿಡಿಕೆಗಳುಳ್ಳ ಉಕ್ಕಿನ ಸ್ಕ್ರಾಪರ್‌ಗಳು

(xiv) ಹೋಸ್‌ಗಳು ಮತ್ತು ತೊಳೆಯುವ ಉಪಕರಣಗಳು

**6** (1) ಈ ನಿಯಮಗಳಡಿಯಲ್ಲಿ ಎಲ್ಲಾ ರಕ್ಷಣಾತ್ಮಕ ಕವಚಗಳು ಮತ್ತು ಸುರಕ್ಷತಾ ಸಾಧನಗಳನ್ನು ಪ್ರತಿ ಆರು ತಿಂಗಳಿಗೊಮ್ಮೆ ಪರೀಕ್ಷಿಸಬೇಕು ಮತ್ತು ಒಂದು ಒಳಚರಂಡಿ ಅಥವಾ ಸೆಪ್ಟಿಕ್‌ಟ್ಯಾಂಕ್ ಸ್ವಚ್ಛಗೊಳಿಸಲು ಒಬ್ಬ ವ್ಯಕ್ತಿಯನ್ನು ತೊಡಗಿಸುವ ಉದ್ಯೋಗದಾತನು ಎಲ್ಲಾ ಉಪಕರಣಗಳ ಅಗತ್ಯವಾದ ದುರಸ್ತಿ ಅಥವಾ ಬದಲಿ ಮಾಡುವಿಕೆಯನ್ನು ಮಾಡಬೇಕಾಗುತ್ತದೆ.

(2) ಶುದ್ಧೀಕರಣಕ್ಕಾಗಿ ಒಳಚರಂಡಿ ಅಥವಾ ಸೆಪ್ಟಿಕ್‌ಟ್ಯಾಂಕ್‌ಗಳನ್ನು ಪ್ರವೇಶಿಸುವ ಕಾರ್ಮಿಕನಿಗೆ ಆರಾಮದಾಯಕ ದೇಹದ ಸೂಟುಗಳನ್ನು ಲಭ್ಯವಾಗುವಂತೆ ಮಾಡಬೇಕಾಗುತ್ತದೆ. ಐದು ಅಡಿಗಳಿಗಿಂತಲೂ ಹೆಚ್ಚು ಆಳವಿರುವ ಮ್ಯಾನ್‌ಹೋಲ್ ಒಳಗೆ ಪ್ರವೇಶಿಸುವ ಕಾರ್ಮಿಕರಿಗೆ ಉದ್ಯೋಗದಾತನು ಪೂರ್ಣ ದೇಹದ ಸೂಟ್‌ಗಳನ್ನು ಒದಗಿಸಬೇಕು ಮತ್ತು ಪರ್ಯಾಯವಾಗಿ ಐದು ಅಡಿಗಳಿಗಿಂತ ಕಡಿಮೆ ಆಳದ ಮ್ಯಾನ್‌ಹೋಲ್ ಪ್ರವೇಶಿಸುವವರಿಗೆ ಮೀನುಗಾರಿಕೆಯಲ್ಲಿ ಬಳಸುವ ಪಾರ್ಶಿಯಲ್ ವೇಡರ್ ಸೂಟುಗಳನ್ನು ನೀಡಬೇಕು.

(3) ವ್ಯಕ್ತಿಯೊಬ್ಬನು ಒಳಚರಂಡಿ ಅಥವಾ ಸೆಪ್ಟಿಕ್‌ಟ್ಯಾಂಕ್‌ನ್ನು ಸ್ವಚ್ಛಗೊಳಿಸುವ ಮುನ್ನ ಉದ್ಯೋಗದಾತನು ಈ ಕೆಳಗಿನ ಸುರಕ್ಷತಾ ಮುನ್ನೆಚ್ಚರಿಕೆಗಳನ್ನು ಖಚಿತಪಡಿಸಿಕೊಳ್ಳಬೇಕು. ಅವುಗಳೆಂದರೆ:–

ಎ) ಎಲ್ಲಾ ಸಮಯದಲ್ಲೂ ಕನಿಷ್ಠ ಮೂರು ಉದ್ಯೋಗಿಗಳು ಹಾಜರಿರುತ್ತಾರೆ. ಅವರಲ್ಲಿ ಒಬ್ಬರು ಮೇಲ್ವಿಚಾರಕರಾಗಿರಬೇಕು.

ಬಿ) ಸೀಮಿತ ಸ್ಥಳದಲ್ಲಿನ ವಾತಾವರಣವನ್ನು ಆಮ್ಲಜನಕದ ಕೊರತೆ ಮತ್ತು ಕೆಳಗಿನವುಗಳನ್ನು ಒಳಗೊಂಡಂತೆ, ಆದರೆ ಅಷ್ಟಕ್ಕೇ ಸೀಮಿತವಲ್ಲದ ವಿಷಕಾರಿ ಮತ್ತು ದಹನಕಾರಿ ಅನಿಲಗಳಾದ ಹೈಡ್ರೋಜನ್ ಸಲ್ಫೈಡ್, ಕಾರ್ಬನ್ ಮಾನಾಕ್ಸೈಡ್, ಮೀಥೇನ್ ಮತ್ತು ಗ್ಯಾಸೊಲಿನ್ ಆವಿಯಂತಹ ಅನಿಲಗಳ ಇರುವಿಕೆಗೆ, ಈ ಕೆಳಗಿನ ಪತ್ತೆ ಹಚ್ಚುವ ವಿಧಾನಗಳನ್ನೂ ಒಳಗೊಂಡಂತೆ, ತಪಾಸಣಾ ಪರೀಕ್ಷೆಗಳ ಮೂಲಕ ಪರೀಕ್ಷೆಗಳ ಒಳಪಡಿಸಬೇಕು:–

(i) ಶೋಧಕ ದೀಪವನ್ನು ಮ್ಯಾನ್‌ಹೋಲ್‌ಗೆ ಇಳಿಸುವುದು,

(ii) ಆರ್ದ್ರ ಸೀಸದ ಆಸಿಟೇಟ್ ಕಾಗದವನ್ನು ಒಳಸೇರಿಸುವುದು, ಇದು ಅಪಾಯಕಾರಿ ಅನಿಲಗಳ ಉಪಸ್ಥಿತಿಯಲ್ಲಿ ತನ್ನ ಬಣ್ಣವನ್ನು ಬದಲಾಯಿಸುತ್ತದೆ,

(iii) ಗ್ಯಾಸ್ ಡಿಟೆಕ್ಟರ್ ಮುಖವಾಡಗಳ ಮೂಲಕ ಅನಿಲಗಳ ಪತ್ತೆ ಮಾಡುವುದು.

ಸಿ) ಉಪ–ನಿಯಮ (1) ಅಡಿಯಲ್ಲಿ ಸ್ವಚ್ಛಗೊಳಿಸುವಿಕೆಯನ್ನು ಪ್ರಾರಂಭಿಸುವ ಮೊದಲು ಉಪ–ನಿಯಮ (3)ರ ಷರತ್ತು (ಎ)ನಲ್ಲಿ ಉಲ್ಲೇಖಿಸಲಾದ ಮೇಲ್ವಿಚಾರಣೆಯಂತೆ, ಒಳಚರಂಡಿಯಲ್ಲಿ ಯಾವುದೇ ಅಪಾಯಕಾರಿ ವಾತಾವರಣವಿರಬಹುದೇ ಎಂದು ಪೂರ್ವಭಾವಿಯಾಗಿ ತಿಳಿಯಲು, ಸಮೀಪವಿರುವ ಯಾವುದೇ ಕೈಗಾರಿಕೆಗಳ ತ್ಯಾಜ್ಯವು ಈ ಒಳಚರಂಡಿಯನ್ನು ಪ್ರವೇಶಿಸುತ್ತದೆಯೇ ಎಂಬುದನ್ನು ಪರಿಶೀಲಿಸಬೇಕು ಮತ್ತು ಗೊತ್ತುಪಡಿಸಿಕೊಳ್ಳಬೇಕು.

ಡಿ) ಮೆಟಲ್–ರಂಗ್ ಏಣಿಯ ಸ್ಥಿತಿಯನ್ನು ಮತ್ತು ಮ್ಯಾನ್‌ಹೋಲ್‌ನ ಪಾರ್ಶ್ವಗೋಡೆಗಳು ಕುಸಿಯುವ ಅಪಾಯವಿದೆಯೇ ಎಂಬುದನ್ನು ಪರಿಶೀಲಿಸತಕ್ಕದ್ದು.

ಇ) ಸಂಚಾರ ಮತ್ತು ಪಾದಚಾರಿ ಅಡ್ಡಗಟ್ಟುಗಳನ್ನು ಎಲ್ಲಾ ಸಮಯದಲ್ಲೂ ನೀಡಬೇಕು.

ಎಫ್) ಧ್ವಜ ಹಿಡಿದು ನಿಂತಿರುವ ಒಬ್ಬ ಮನುಷ್ಯನನ್ನು ಮ್ಯಾನ್‌ಹೋಲ್ ಜಾಗದಿಂದ ಕನಿಷ್ಠ 50 ಅಡಿಗಳಷ್ಟು ದೂರದಲ್ಲಿ ನಿಲ್ಲಿಸಬೇಕು ಮತ್ತು ಆತನು ಕನಿಷ್ಟ 500 ಅಡಿಗಳಷ್ಟು ದೂರದಿಂದ ವಾಹನ ಸವಾರರಿಗೆ ಗೋಚರಿಸಬೇಕು.

ಜಿ) ಚರಂಡಿ ಕೆಲಸಗಾರರ ನಿಯಮಿತ ವೈದ್ಯಕೀಯ ತಪಾಸಣೆ ಮಾಡಿಸಬೇಕು. ಇದು ಉಸಿರಾಟದ ಅಂಗಗಳ ಪರೀಕ್ಷೆ, ಚರ್ಮದ ಗಾಯಗಳು, ಮತ್ತು ಕೆಲಸಕ್ಕೆ ಸಂಬಂಧಿಸಿದಂತೆ ಕಂಡು ಬರುವ ಇತರ ಕಾಯಿಲೆಗಳು ಮತ್ತು ಗಾಯಗಳ ತಪಾಸಣೆಯನ್ನು ಒಳಗೊಂಡಿರುತ್ತದೆ. ಇಂತಹ ರೋಗಗಳು ಅಥವಾ ಗಾಯಗಳಿಂದ ಪೀಡಿತ ಒಳಚರಂಡಿ ಕಾರ್ಮಿಕರು ಚರಂಡಿಗಳನ್ನು ಸ್ವಚ್ಛಗೊಳಿಸಲು ಪ್ರವೇಶಿಸುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ಈ ಪರೀಕ್ಷೆಗಳನ್ನು ಮಾಡಿಸಬೇಕು.

ಹೆಚ್) ಈ ಕಾರ್ಮಿಕರಿಗೆ ಹಾನಿಕಾರಕ ಪದಾರ್ಥಗಳು ಮತ್ತು ಚರಂಡಿಗಳಲ್ಲಿ ಅನಿಲಗಳಿಗೆ ಒಡ್ಡಿಕೊಳ್ಳುವುದರಿಂದ ಉಂಟಾಗುವ ಉಸಿರಾಟದ ಮತ್ತು ಚರ್ಮದ ಕಾಯಿಲೆಗಳು ಮತ್ತು ಇತರ ಔದ್ಯೋಗಿಕ ಕಾಯಿಲೆಗಳ ವಿರುದ್ಧ ನಿಯಮಿತವಾಗಿ ಲಸಿಕೆ (ವ್ಯಾಕ್ಸಿನೇಷನ್) ಹಾಕಿಸುವುದು.

ಐ) ಶುಚಿಗೊಳಿಸುವ ಕೆಲಸದ ಸಮಯದಲ್ಲಿ ಗಾಯಗಳು ಅಥವಾ ಅಂತಹ ಕೆಲಸಕ್ಕೆ ಸಂಬಂಧಿಸಿದ ರೋಗಗಳನ್ನು ತಪ್ಪಿಸಲು ಮತ್ತು ಕೆಲಸದ ಸ್ಥಳದಲ್ಲಿ ತುರ್ತು ಪರಿಸ್ಥಿತಿಯಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಅನುವಾಗುವಂತೆ, ಸ್ಥಳದಲ್ಲಿರುವ ಎಲ್ಲಾ ಕೆಲಸಗಾರರಿಗೆ ತರಬೇತಿಯನ್ನು ನೀಡಲಾಗುತ್ತದೆ ಮತ್ತು ಸ್ವಚ್ಛಗೊಳಿಸುವ ಕೆಲಸದಲ್ಲಿ ತೊಡಗಿಸಿಕೊಂಡಿರುವ ಎಲ್ಲಾ ಸಾಧನಗಳನ್ನು ನಿರ್ವಹಿಸಲು ಅವರಿಗೆ ಸಾಕಷ್ಟು ತಿಳುವಳಿಕೆ ಇರುತ್ತದೆ ಎಂದು ಖಚಿತಪಡಿಸಿಕೊಳ್ಳಬೇಕು, ಮತ್ತು ತರಬೇತಿಯನ್ನು ಪ್ರತಿ ಎರಡು ವರ್ಷಗಳಿಗೊಮ್ಮೆ ನಡೆಸಲಾಗುತ್ತದೆ ಮತ್ತು ನೌಕರರಿಗೆ ಸ್ವಚ್ಛಗೊಳಿಸುವ ವಿಧಾನ ಮತ್ತು ತಂತ್ರಗಾರಿಕೆಯ ಬಗ್ಗೆ ಆಗಿರಬಹುದಾದ ಯಾವುದೇ ಬದಲಾವಣೆಗಳ ಬಗ್ಗೆ ತಿಳಿದಿರುವುದನ್ನು ಖಚಿತಪಡಿಸಿಕೊಳ್ಳಬೇಕು.

ಜೆ) ಮೇಲ್ವಿಚಾರಕರು ಹತ್ತಿರದ ಆಸ್ಪತ್ರೆಗಳು ಅಥವಾ ಚಿಕಿತ್ಸಾಲಯಗಳ ಹೆಸರುಗಳು, ವಿಳಾಸಗಳು ಮತ್ತು ದೂರವಾಣಿ ಸಂಖ್ಯೆಗಳನ್ನು ಹೊಂದಿದ್ದಾರೆ ಮತ್ತು ಇಟ್ಟುಕೊಳ್ಳುತ್ತಾರೆ ಎಂದು ಖಾತ್ರಿಪಡಿಸಿಕೊಳ್ಳಬೇಕು.

ಕೆ) ಒಳಚರಂಡಿ ಅಥವಾ ಸೆಪ್ಟಿಕ್ ಟ್ಯಾಂಕ್ ಅನ್ನು ಶುಚಿಗೊಳಿಸುವುದನ್ನು:-

(i) ಹಗಲು-ರಾತ್ರಿಯಲ್ಲಿ ಮಾತ್ರ ಮಾಡಿಸಬೇಕು: ಮತ್ತು

(ii) ಸತತವಾಗಿ 90 ನಿಮಿಷಗಳ ಅವಧಿಯನ್ನು ಮೀರಬಾರದು, ಎರಡು ಬಾರಿಯ ಕೆಲಸದ ನಡುವೆ 30 ನಿಮಿಷಗಳ ಕಡ್ಡಾಯ ಮಧ್ಯಂತರ ವಿರಾಮ ಇರಬೇಕು.

ಎಲ್) ಕೆಲಸದ ಪ್ರದೇಶಕ್ಕೆ ಹಾನಿಕಾರಕ ವಸ್ತುಗಳನ್ನು ಸಾಗಿಸುವ ಯಾವುದೇ ಮಾರ್ಗಗಳನ್ನು ಗುರುತಿಸಿ ಮತ್ತು ಅವುಗಳನ್ನು ಮುಚ್ಚಿ ಅಥವಾ ಬದಲಿ ಮಾರ್ಗಕ್ಕೆ ತಿರುಗಿಸಿ.

ಎಮ್) ಕಾರ್ಯಾಚರಣೆ ಮತ್ತು ಪುನರಾರಂಭದ ವಿಧಾನಗಳನ್ನು ಕೆಲಸದ ಸ್ಥಳದಲ್ಲಿ ಲಿಖಿತ ರೂಪದಲ್ಲಿ ಪ್ರದರ್ಶಿಸಲಾಗುತ್ತದೆ ಎಂದು ಖಚಿತಪಡಿಸಿಕೊಳ್ಳಿ.

ಎನ್) ಮೇಲ್ಬದಿಯಲ್ಲಿರುವ ತೆರೆದ ಜಾಗದ ಮೂಲಕ ಒಳಪ್ರವೇಶವನ್ನು ಮಾಡುವುದಾಗಿದ್ದರೆ, ವ್ಯಕ್ತಿಯನ್ನು ಲಂಬವಾಗಿ ಇಳಿಸುವ ಒಂದು ಸಾಧನವನ್ನು ಬಳಸಿ, ಮತ್ತು 5 ಅಡಿ ಆಳಕ್ಕಿಂತ ಹೆಚ್ಚಿನ ಲಂಬ ಸ್ಥಳಗಳಿಂದ ಕೆಲಸಗಾರರನ್ನು ಮೇಲೆತ್ತಲು ಯಾಂತ್ರಿಕ ಸಾಧನವು ಲಭ್ಯವಿರುತ್ತದೆ ಎಂದು ಖಚಿತಪಡಿಸಿಕೊಳ್ಳಿ.

ಒ) ಯಾವುದೇ ಸೀಮಿತ ಜಾಗದಲ್ಲಿ ಕೆಲಸ ಮಾಡುವ ಸಮಯದಲ್ಲಿ ಪ್ರಥಮ ಚಿಕಿತ್ಸೆ ಮತ್ತು ಕಾರ್ಡಿಯೋಪಲ್ಮನರಿ ರೆಸಿಸಿಟೇಶನ್ (ಮತ್ತೆ ಪ್ರಜ್ಞೆ ಬರುವಂತೆ ಮಾಡುವ ಚಿಕಿತ್ಸಾ ವಿಧಾನ) ನಲ್ಲಿ ತರಬೇತಿ ಪಡೆದ ಕನಿಷ್ಠ ಒಬ್ಬ ವ್ಯಕ್ತಿಯು ತಕ್ಷಣವೇ ಲಭ್ಯವಾಗುವಂತೆ ಇರಬೇಕು.

ಪಿ) ಮ್ಯಾನ್‌ಹೋಲ್‌ನಲ್ಲಿರುವ ಆಮ್ಲಜನಕದ ಅಂಶವು ಎಲ್ಲಾ ಹಂತಗಳಲ್ಲಿ (ಕೆಳಗೆ, ಮಧ್ಯಭಾಗ ಮತ್ತು ಮೇಲ್ಭಾಗದಲ್ಲಿ) ಮ್ಯಾನ್‌ಹೋಲ್‌ನ ಆಳತೆಯ ಸೀಮಿತ ಸ್ಥಳದಲ್ಲಿ ಕನಿಷ್ಠ 19.5% ಇರಬೇಕು ಮತ್ತು ಆಮ್ಲಜನಕ ಪ್ರಮಾಣವು 19.5% ಕ್ಕಿಂತ ಕಡಿಮೆ ಇದ್ದರೆ ಮತ್ತು 21% ಕ್ಕಿಂತ ಹೆಚ್ಚಿದ್ದರೆ ಮ್ಯಾನ್‌ಹೋಲ್‌ಗೆ ಯಾರೂ ಇಳಿಯಬಾರದು.

ಕ್ಯು) ಕೆಲಸ ಮಾಡುವ ಸ್ಥಳದ ಎರಡೂ ಬದಿಗಳಲ್ಲಿ ಕನಿಷ್ಠ ಎರಡು ಅಥವಾ ಮೂರು ಮ್ಯಾನ್‌ಹೋಲ್‌ಗಳನ್ನು ತೆರೆಯುವ ಮೂಲಕ ಒಳಚರಂಡಿ ಮಾರ್ಗದಲ್ಲಿ ಗಾಳಿಯಾಡುವಂತೆ (ವೆಂಟಿಲೇಟ್) ಮಾಡಬೇಕಾಗುತ್ತದೆ.

ಆರ್) ಾರ್ಯಾಚರಣೆಯನ್ನು ಪ್ರಾರಂಭ ಮಾಡುವ ಕನಿಷ್ಠ ಒಂದು ಗಂಟೆಗೆ ಮೊದಲು ಮ್ಯಾನ್‌ಹೋಲ್ ಅನ್ನು ತೆರೆದಿಡಬೇಕು.

ಎಸ್) ಯಾವುದೇ ವ್ಯಕ್ತಿ, ವಿಶೇಷವಾಗಿ ಮಕ್ಕಳು, ಆಕಸ್ಮಿಕವಾಗಿ ಒಳಚರಂಡಿಗೆ ಬೀಳದಂತೆ ತಡೆಗಟ್ಟಲು ತೆರೆದ ಮ್ಯಾನ್‌ಹೋಲ್ ಸುತ್ತ ಸೂಕ್ತವಾದ ಬೇಲಿ ಹಾಕಬೇಕು ಅಥವಾ ತಡೆಗೋಡೆ ಇಡಬೇಕು ಅಥವಾ ಬಟ್ಟೆಯ ಅಥವಾ ತಂತಿ ಬಲೆಯನ್ನು ವೆಲ್ಡ್ ಮಾಡಿದ ಡಮ್ಮಿ ಮುಚ್ಚಳವನ್ನು ಬಳಸಬಹುದು.

ಟಿ) ಎಲ್ಲಾ ನೌಕರರು ಒಳಚರಂಡಿ ಲೈನ್ ಪ್ರವೇಶಿಸುವ ಮೊದಲು ಸುರಕ್ಷತಾ ಕವಚ ಮತ್ತು ಸುರಕ್ಷತಾ ಸಾಧನಗಳನ್ನು ಬಳಸುತ್ತಾರೆ ಎಂದು ಖಚಿತಪಡಿಸಿಕೊಳ್ಳಬೇಕು.

ಯು) ಮ್ಯಾನ್‌ಹೋಲ್ ಅಥವಾ ಒಳಚರಂಡಿಯನ್ನು ಪ್ರವೇಶಿಸುವ ವ್ಯಕ್ತಿಯ ಮೇಲೆ ಕಣ್ಗಾವಲಿಡಲು ಕಾರ್ಯಾಚರಣೆಯ ಅವಧಿಯ ಉದ್ದಕ್ಕೂ ಸಿಗ್ನಲ್ ಅಥವಾ ಕ್ಯಾಮೆರಾ ಅಥವಾ ಸಿ.ಸಿ.ಟಿ.ವಿ ಇತ್ಯಾದಿಗಳನ್ನು ಬಳಸಬೇಕು.

ವಿ) ಮ್ಯಾನ್‌ಹೋಲ್ ಪ್ರವೇಶಿಸುವ ಮೊದಲು ಮ್ಯಾನ್‌ಹೋಲ್ ರಿಂಗ್‌ಗಳ ಅಥವಾ ಮೆಟ್ಟಿಲುಗಳ ರಚನಾತ್ಮಕ ಸುರಕ್ಷತೆಯನ್ನು ಪರೀಕ್ಷಿಸಬೇಕು.

ಡಬ್ಲ್ಯು) ಕೆಲಸದ ಅವಧಿಯಲ್ಲಿ ಅಗತ್ಯವಿರುವಲ್ಲಿ ಪೋರ್ಟಬಲ್ ಅಲ್ಯೂಮಿನಿಯಂ ಏಣಿ ಲಭ್ಯವಿದೆ ಮತ್ತು ಪೋರ್ಟಬಲ್ ಏಣಿಯನ್ನು ಬಳಸುವಾಗ ಸರಿಯಾಗಿ ಇಡಲಾಗಿದೆ ಅಥವಾ ಫಿಕ್ಸ್ ಮಾಡಲಾಗಿದೆ ಎಂದು ಖಚಿತಪಡಿಸುವುದು.

ಎಕ್ಸ್) ಮ್ಯಾನ್‌ಹೋಲ್‌ಗೆ ಬಿದ್ದು ಕೆಲಸಗಾರನನ್ನು ಗಾಯಗೊಳಿಸಬಹುದಾದ ಯಾವುದೇ ವಸ್ತು ಅಥವಾ ಉಪಕರಣಗಳು ಮ್ಯಾನ್‌ಹೋಲ್ ಅಂಚಿನಲ್ಲಿಲ್ಲ ಎಂದು ಖಚಿತಪಡಿಸಿಕೊಳ್ಳಬೇಕು.

ವೈ) ಒಳಚರಂಡಿ ಶುದ್ಧೀಕರಣದ ಸಮಯದಲ್ಲಿ ಬಳಸುವ ಸಾಧನಗಳು ಸ್ಫೋಟಕಗಳಲ್ಲ ಮತ್ತು ಬೆಂಕಿ ನಿರೋಧಕ ಎಂದು ಖಚಿತಪಡಿಸಿಕೊಳ್ಳಬೇಕು.

(ಜೆಡ್) ಧೂಮಪಾನ, ತೆರೆದ ಜ್ವಾಲೆಗಳನ್ನು ಮ್ಯಾನ್‌ಹೋಲ್ ಒಳಗೆ ಮತ್ತು ತೆರೆದ ಮ್ಯಾನ್‌ಹೋಲ್‌ಗಳ ಸನಿಹದಲ್ಲಿ ನಿಷೇಧಿಸಲಾಗಿದೆ.

(ಜೆಡ್ಎ) ಹಠಾತ್ ಅಥವಾ ಅನಿರೀಕ್ಷಿತ ವಾತಾವರಣದ ಬದಲಾವಣೆಯ ಸಂದರ್ಭದಲ್ಲಿ, ಕನಿಷ್ಠ 10 ನಿಮಿಷದ ವಾಯು ಪೂರೈಕೆ ಇರುವ ತುರ್ತುಪರಿಹಾರದ ಉಸಿರಾಟದ ಉಪಕರಣವನ್ನು ಧರಿಸಲಾಗುತ್ತದೆ ಎಂದು ಖಚಿತಪಡಿಸಿಕೊಳ್ಳಬೇಕು.

7 ವ್ಯಕ್ತಿಯು ಒಂದು ಒಳಚರಂಡಿ ಅಥವಾ ಸೆಪ್ಟಿಕ್ ತೊಟ್ಟಿಯ ಶುದ್ಧೀಕರಣದಲ್ಲಿ ತೊಡಗಿರುವ ಸಮಯದಲ್ಲಿ ಉದ್ಯೋಗದಾತನು ಕೆಳಗಿನ ಸುರಕ್ಷತಾ ಮುನ್ನೆಚ್ಚರಿಕೆಗಳನ್ನು ಖಚಿತಪಡಿಸಿಕೊಳ್ಳಬೇಕು:–

(i) ಕೆಲಸದ ಉತ್ತಮ ವಾತಾವರಣಕ್ಕಾಗಿ ಮುಕ್ತ ವಾಯು ಸಂಚಾರದ ವ್ಯವಸ್ಥೆ ಮಾಡಲು ಬ್ಯಾಟರಿಗಳಿಂದ ಕೂಡಿದ ಪೋರ್ಟಬಲ್ ಫ್ಯಾನ್‌ಗಳು ಮತ್ತು ಏರ್ ಬ್ಲೋವರ್‌ಗಳನ್ನು, ಒಳಚರಂಡಿನಲ್ಲಿನ ವ್ಯಕ್ತಿಗಳ ಪ್ರವೇಶದ ಅಂದಾಜು ಅವಧಿಗಿಂತ ಹೆಚ್ಚಿನ ಸಾಮರ್ಥ್ಯದೊಂದಿಗೆ ಒಳಚರಂಡಿಗಳಿಗೆ ಸಾಗಿಸಬೇಕು ಮತ್ತು ಒಂದು ವಾತಾಯನ ವ್ಯವಸ್ಥೆಯನ್ನು ಮ್ಯಾನ್‌ಹೋಲ್ ಬಾಯಿಯ ಹತ್ತಿರ ಸ್ಥಾಪಿಸಬೇಕು.

(ii) ಫ್ಲಾಶ್ ದೀಪಗಳು ಮತ್ತು ದ್ವಿ–ಪಥ ರೇಡಿಯೋಗಳಂತಹ ಸಂವಹನ ಸಾಧನಗಳನ್ನು ಚರಂಡಿ ಒಳಗೆ ತೆಗೆದುಕೊಂಡು ಹೋಗಬೇಕು.

(iii) ಕೆಲಸದ ಸ್ಥಳದಲ್ಲಿ ಈ ಕೆಳಗಿನ ರಕ್ಷಣಾ ಉಪಕರಣಗಳು ಲಭ್ಯವಿರಬೇಕು:–

ಎ) ಮೂರು ಕಾಲಿನ ಒಂದು ಪೀಠ (ಟ್ರೈಪಾಡ್) ಮತ್ತು ಸರಂಜಾಮು ವ್ಯವಸ್ಥೆ, ಅಥವಾ ಗಾಯಗೊಂಡ ಕೆಲಸಗಾರನನ್ನು ಮೇಲೆ ತರುವುದನ್ನು ಖಾತರಿಪಡಿಸುವ ಇನ್ನಿತರ ಯಾವುದೇ ವ್ಯವಸ್ಥೆ.

ಬಿ) ಗಾಯಗೊಂಡ ಕೆಲಸಗಾರನನ್ನು ತುರ್ತು ಸಾರಿಗೆ ಮೂಲಕ ಸ್ಥಳಾಂತರಿಸುವುದಕ್ಕಾಗಿ ಬ್ಯಾಸ್ಕೆಟ್ ಸ್ಟ್ರೆಚರ್ ಅಥವಾ ಅಂತಹುದೇ ಸಾಧನ ಲಭ್ಯವಿರಬೇಕು.

ಸಿ) ಅನುಬಂಧ –1ರಲ್ಲಿ ನೀಡಿದ ರೀತಿಯಲ್ಲಿ ಪ್ರಥಮ ಚಿಕಿತ್ಸಾ ಉಪಕರಣ ಮತ್ತು ತರಬೇತಿ ಪಡೆದ ಸಿಬ್ಬಂದಿ ತಕ್ಷಣವೇ ಲಭ್ಯವಿರಬೇಕು.

(iv) ಸನಿಹದಲ್ಲಿ ಆಂಬುಲೆನ್ಸ್ ಲಭ್ಯತೆಯನ್ನು ಮತ್ತು ಫಾಲೋ ಅಪ್ ವ್ಯವಸ್ಥೆ ಲಭ್ಯವಿರುವುದನ್ನು ಉದ್ಯೋಗದಾತ ಖಚಿತಪಡಿಸಿಕೊಳ್ಳಬೇಕು.

(v) ಕೆಲಸಕ್ಕೆ ನೇಮಕಗೊಂಡ ವ್ಯಕ್ತಿ ಕನಿಷ್ಠ ಹತ್ತು ಲಕ್ಷ ರೂಪಾಯಿ ವಿಮಾ ಪಾಲಿಸಿ ಹೊಂದಿದ್ದಾರೆ ಎಂದು ಉದ್ಯೋಗದಾತ ಖಾತ್ರಿಪಡಿಸಿಕೊಳ್ಳಬೇಕು ಮತ್ತು ಅದರ ಪ್ರೀಮಿಯಮ್‌ಅನ್ನು ಉದ್ಯೋಗದಾತ ಪಾವತಿಸಬೇಕು.

**8**. ಒಂದು ಸುತ್ತಿನ ಸ್ವಚ್ಛಗೊಳಿಸುವಿಕೆಯ ನಂತರ ಒಳಚರಂಡಿ ಅಥವಾ ಸೆಪ್ಟಿಕ್ ತೊಟ್ಟಿಯ ಶುದ್ಧೀಕರಣದಲ್ಲಿ ತೊಡಗಿದ ವ್ಯಕ್ತಿಯು ಒಳಚರಂಡಿ ಅಥವಾ ಸೆಪ್ಟಿಕ್ ತೊಟ್ಟಿಯಿಂದ ಹೊರಬಂದ ನಂತರ ಈ ಕೆಳಗಿನ ಸ್ವಚ್ಛತೆಯ–ನಂತರದ ಸುರಕ್ಷತಾ ಮುನ್ನೆಚ್ಚರಿಕೆಗಳನ್ನು ಉದ್ಯೋಗದಾತ ಖಚಿತಪಡಿಸಿಕೊಳ್ಳಬೇಕು:

(i) ಕಲುಷಿತ ವಸ್ತ್ರವನ್ನು ತೆಗೆಯುವ ಸೌಲಭ್ಯಗಳನ್ನು ಮತ್ತು ಸ್ವಚ್ಛಗೊಳಿಸಲು, ಒಣಗಿಸಲು ತಕ್ಕುದಾದ ಸೌಲಭ್ಯಗಳನ್ನು ಒದಗಿಸಬೇಕು.

(ii) ತೊಳೆಯಲು ಬಳಸುವ ವಸ್ತುಗಳು ನೀರು, ಸಾಬೂನು, ಹ್ಯಾಂಡ್ ಸ್ಯಾನಿಟೈಜರ್ ಮತ್ತು ಸಾಕಷ್ಟು ಮತ್ತು ವೈದ್ಯಕೀಯವಾಗಿ ದೃಢೀಕರಿಸಿದ ಚರ್ಮದ ಮುಲಾಮುಗಳನ್ನು ಒಳಗೊಳ್ಳುತ್ತದೆ ಆದರೆ ಇದು ಅಷ್ಟಕ್ಕೇ ಸೀಮಿತವಾಗಿರಬಾರದು.

(iii) ಚರ್ಮದ ಮೇಲೆ ಯಾವುದೇ ಕಡಿತ/ಮೂಗೇಟುಗಳು ಅಥವಾ ಒಳಚರಂಡಿಯನ್ನು ಸ್ವಚ್ಛಗೊಳಿಸುವ ಕಾರಣದಿಂದಾಗಿ ಉಂಟಾದ ಉಸಿರಾಟದ ಸಮಸ್ಯೆಗಳಿಗೆ ತಕ್ಷಣವೇ ಚಿಕಿತ್ಸೆ ಕೊಡಿಸಬೇಕು.

# ಅಧ್ಯಾಯ –III

## ಅನಾರೋಗ್ಯಕರ ಶೌಚಾಲಯಗಳು/ಶೌಚಗುಂಡಿಗಳು

**9**. ಮಾನವನ ಮಲ ಯಾವುದೇ ವಾಸನೆಯಿಲ್ಲದ ಸ್ಥಿರವಸ್ತುವಾಗಿ ಪರಿವರ್ತನೆಗೊಂಡಾಗ ಅದನ್ನು ಸಂಪೂರ್ಣವಾಗಿ ಕೊಳೆತ/ವಿಭಜನೆಗೊಂಡ ವಸ್ತುವೆಂದು ಪರಿಗಣಿಸಲಾಗುತ್ತದೆ ಮತ್ತು ಅದು ಮೌಲ್ಯಯುತ ಸಸ್ಯ ಪೋಷಕಾಂಶಗಳನ್ನು ಹೊಂದಿರುತ್ತದೆ.

### ಶೌಚಗುಂಡಿಗಳ ಸಮೀಕ್ಷೆ

1. ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಇರುವ ಶೌಚಗುಂಡಿಗಳ ಸಮೀಕ್ಷೆ ನಡೆಸಲು ಮತ್ತು ಅದನ್ನು ಪ್ರಕಟಿಸಲು ಸೂಕ್ತ ವೇಳಾ ವೇಳಾಪಟ್ಟಿಯನ್ನು ತಯಾರಿಸಬೇಕು.

2. ಸ್ಥಳೀಯ ಪ್ರಾಧಿಕಾರವು ತನ್ನ ಅಧಿಕಾರ ವ್ಯಾಪ್ತಿಯೊಳಗೆ ಬರುವ ಶೌಚಗುಂಡಿಗಳನ್ನು ಸ್ವಚ್ಛಗೊಳಿಸುವ ಸಫಾಯಿ ಕರ್ಮಚಾರಿಗಳು ಅಥವಾ ನೈರ್ಮಲ್ಯ ಕಾರ್ಮಿಕರ ಕಲ್ಯಾಣಕ್ಕಾಗಿ ಅದರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಸರಕಾರೇತರ ಸಂಘಟನೆಗಳು, ಸಮುದಾಯದ ನಾಯಕರ ನೆರವನ್ನು ಪಡೆದುಕೊಳ್ಳತಕ್ಕದ್ದು.

3. ಶೌಚಗುಂಡಿಗಳ ನಿರ್ಮಾಣ, ನಿರ್ವಹಣೆ ಅಥವಾ ಬಳಕೆಯ ಬಗ್ಗೆ ಯಾವುದೇ ಸರ್ಕಾರೇತರ ಸಂಸ್ಥೆ ಸೇರಿದಂತೆ ಯಾವುದೇ ವ್ಯಕ್ತಿಯು ಸಲ್ಲಿಸಿದ ಯಾವುದೇ ದೂರು ಬಗ್ಗೆ, ದೂರು ಸಲ್ಲಿಸಿದ ಹದಿನೈದು ದಿನಗಳ ಒಳಗೆ ಸ್ಥಳೀಯ ಪ್ರಾಧಿಕಾರವು ವಿಚಾರಣೆಗೊಳಪಡಿಸಬೇಕು.

4. ಸ್ಥಳೀಯ ಪ್ರಾಧಿಕಾರವು ತನ್ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಡಿಯಲ್ಲಿ, ಸಫಾಯಿ ಕರ್ಮಚಾರಿಗಳು ಅಥವಾ ನೈರ್ಮಲ್ಯ ಕಾರ್ಮಿಕರ ಸಮುದಾಯದಿಂದ ಕನಿಷ್ಠ ಎರಡು ಸದಸ್ಯರನ್ನು ಹೊಂದಿರುವ ಒಂದು ಸಮಿತಿಯನ್ನು ರಚಿಸತಕ್ಕದ್ದು, ಅವರಲ್ಲಿ ಒಬ್ಬರು ಮಹಿಳಾ ಸದಸ್ಯೆಯಾಗಿರಬೇಕು ಮತ್ತು ನಾಗರಿಕ ಸಮಾಜದ ಗುಂಪುಗಳಿಂದ ಕನಿಷ್ಠ ಒಬ್ಬ ಸದಸ್ಯರಿರಬೇಕು.

5. ಉಪ–ನಿಯಮ (4)ನಲ್ಲಿ ಉಲ್ಲೇಖಿಸಲಾದ ಸಮಿತಿಯು ಈ ಸಮೀಕ್ಷೆಗೆ ಏರ್ಪಾಡು ಮತ್ತು ಉಸ್ತುವಾರಿ ಮಾಡುತ್ತದೆ ಮತ್ತು ನಡೆಸುವ ಸಮೀಕ್ಷೆಯ ಜೊತೆಗೆ ಒಂದು ಜಾಗೃತಿ ಅಭಿಯಾನವನ್ನು ಏಕಕಾಲದಲ್ಲಿ ನಡೆಸಲಾಗುತ್ತದೆ ಎಂದು ಖಚಿತಪಡಿಸಿಕೊಳ್ಳಿ.

6. ಸ್ಥಳೀಯ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಅಸ್ತಿತ್ವದಲ್ಲಿರುವ ಶೌಚ ಗುಂಡಿಗಳ ಪಟ್ಟಿಯನ್ನು ತಯಾರಿಸಬೇಕು ಮತ್ತು ಸ್ಥಳೀಯ ಪ್ರಾಧಿಕಾರದ ಕಚೇರಿಯ ನೋಟೀಸ್ ಬೋರ್ಡ್ ಮತ್ತು ಎರಡು ಸ್ಥಳೀಯ ಪ್ರತಿದಿನ ಪತ್ರಿಕೆಗಳಲ್ಲಿ ಸಾರ್ವಜನಿಕವಾಗಿ ಆಕ್ಷೇಪಣೆಗಳನ್ನು ಆಹ್ವಾನಿಸಿ, ಪಟ್ಟಿಗೆ ಆಕ್ಷೇಪಣೆ, ಯಾವುದಾದರೂ ಇದ್ದಲ್ಲಿ, ಸ್ವೀಕರಿಸುವ ದಿನಾಂಕದೊಂದಿಗೆ ಪ್ರಕಟಿಸಬೇಕು.

7. ಸ್ಥಳೀಯ ಪ್ರಾಧಿಕಾರವು ಆರಂಭಿಕ ಪಟ್ಟಿಯ ಮೇಲೆ ಸ್ವೀಕರಿಸಿದ ದೂರುಗಳು ಮತ್ತು ಆಕ್ಷೇಪಣೆಗಳನ್ನು ಆಲಿಸಲು ಸೂಚಿಸಿದ ನಿರ್ದಿಷ್ಟ ದಿನಾಂಕದಂದು ಸಭೆಯನ್ನು ಕರೆಯಬೇಕು ಮತ್ತು ಶೌಚ ಗುಂಡಿಗಳ ಅಂತಿಮ ಪಟ್ಟಿಗೆ ಅನುಮೋದನೆ ನೀಡಬೇಕು.

8. ಸ್ಥಳೀಯ ಆಡಳಿತವು ಶೌಚಗುಂಡಿಗಳ ಅಂತಿಮ ಪಟ್ಟಿಯನ್ನು ತಯಾರಿಸಬೇಕು ಮತ್ತು ಅದನ್ನು ಸ್ಥಳೀಯ ಆಡಳಿತದ ನೋಟೀಸ್ ಬೋರ್ಡ್‌ನಲ್ಲಿ ಮತ್ತು ಎರಡು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಬೇಕು, ಇದರಲ್ಲಿ ಒಂದು ಪ್ರಕಟಣೆಯು ಸ್ಥಳೀಯರ ಮಾತೃ ಭಾಷೆಯಲ್ಲಿರಬೇಕು.

9. ಸ್ಥಳೀಯ ಪ್ರಾಧಿಕಾರವು ಅನಾರೋಗ್ಯಕರ ಶೌಚಾಲಯಗಳ ಪಟ್ಟಿಯನ್ನು ಪ್ರಕಟಿಸಿದ ಹದಿನೈದು ದಿನಗಳೊಳಗೆ, ಅನಾರೋಗ್ಯದ ಶೌಚಾಲಯಗಳನ್ನು/ಶೌಚ ಗುಂಡಿಗಳನ್ನು ಹೊಂದಿರುವವರಿಗೆ ಒಂದೋ ಅದನ್ನು ಕೆಡವಲು ಅಥವಾ ಆರು ತಿಂಗಳುಗಳ ಒಳಗೆ ಅದನ್ನು ಒಂದು ಪರಿಪೂರ್ಣ ಶೌಚಾಲಯವನ್ನಾಗಿ ಪರಿವರ್ತಿಸಿಕೊಳ್ಳುವಂತೆ ಒಂದು ನೋಟೀಸನ್ನು ನೀಡಬೇಕು.

10. ಉಪ–ನಿಯಮ (9)ನಲ್ಲಿ ಸೂಚಿಸಲಾದ ಅಂತಹ ನೋಟೀಸಿನ ಒಂದು ಪ್ರತಿಯನ್ನು ಪರೀಕ್ಷಕರಿಗೆ (ಇನ್ಸ್‌ಪೆಕ್ಟರ್) ಕಳುಹಿಸಲಾಗುತ್ತದೆ.

11. ಉಪ–ನಿಯಮ (9)ನಲ್ಲಿ ಉಲ್ಲೇಖಿಸಲಾಗಿರುವ ಸೂಚನೆಯು ಕೇಂದ್ರ ಮತ್ತು ರಾಜ್ಯ ಸರಕಾರದ ಯೋಜನೆಗಳ ಬಗ್ಗೆ ಮಾಹಿತಿಯನ್ನು ಒಳಗೊಂಡಿರುತ್ತದೆ, ಈ ಮಾಹಿತಿಯಲ್ಲಿ ಶೌಚ ಗುಂಡಿಗಳನ್ನು ಕೆಡವಲು ಅಥವಾ ಅದನ್ನು ಒಂದು ಶೌಚಾಲಯವನ್ನಾಗಿ ಪರಿವರ್ತಿಸಲು ಪ್ರೋತ್ಸಾಹಧನ ಪಡೆಯುವ ಹಕ್ಕು ಇರುವ ಬಗ್ಗೆ ಮತ್ತು ಈ ಯೋಜನೆಯ ಅಡಿ ಈ ಸೌಲಭ್ಯಗಳನ್ನು ಪಡೆಯಲು ಫಲಾನುಭವಿಗಳಿಗೆ ಇರಬೇಕಾದ ಅರ್ಹತೆ ಮತ್ತು ಅವುಗಳನ್ನು ಪಡೆಯುವ ವಿಧಾನವನ್ನು ಕೂಡಾ ಹೊಂದಿರುತ್ತದೆ.

12. ಉಪ–ನಿಯಮ (14)ರಲ್ಲಿ ಉಲ್ಲೇಖಿಸಲಾದ ಸಮಿತಿಯು ವರದಿಯನ್ನು ಜಿಲ್ಲಾ ನ್ಯಾಯಾಧೀಶರಿಗೆ, ಅಥವಾ ಈ ಉದ್ದೇಶಕ್ಕಾಗಿ ಅವರಿಂದ ಗುರುತಿಸಲ್ಪಟ್ಟ ಯಾವುದೇ ಇಲಾಖೆಗೆ ಸಲ್ಲಿಸಬೇಕು. ನಂತರ ಅವರು ತನ್ನ ಅಧಿಕಾರ ವ್ಯಾಪ್ತಿಯ ಅಡಿಯಲ್ಲಿ ಬರುವ ಎಲ್ಲಾ ಸ್ಥಳೀಯ ಆಡಳಿತದ ಕ್ರೋಢೀಕೃತ ವರದಿಯನ್ನು ರಾಜ್ಯ ಮಟ್ಟದ ಸಮೀಕ್ಷಾ ಸಮಿತಿಗೆ ಸಲ್ಲಿಸಬೇಕು.

13. ರಾಜ್ಯಮಟ್ಟದ ಸಮೀಕ್ಷಾ ಸಮಿತಿಯು ಸಮೀಕ್ಷೆಯ ವರದಿಯನ್ನು, ಗ್ರಾಮೀಣ ಪ್ರದೇಶಗಳಲ್ಲಿ ಶೌಚಗುಂಡಿಗಳನ್ನು ಶೌಚಾಲಯವನ್ನಾಗಿ ಪರಿವರ್ತಿಸುವ ಯೋಜನೆಗಳನ್ನು ನಿರ್ವಹಿಸುವ ಕೇಂದ್ರ ಸಚಿವಾಲಯ/ಇಲಾಖೆಗೆ ಸಲ್ಲಿಸಬೇಕು.

14. ಕೇಂದ್ರ ಅಥವಾ ರಾಜ್ಯ ಸರಕಾರದ ಸಂಬಂಧಿತ ಯೋಜನೆಗಳ ಅಡಿಯಲ್ಲಿ ಅರ್ಹ ಫಲಾನುಭವಿಗಳು ಅಂತಹ ಯೋಜನೆಗಳ ಅಡಿಯಲ್ಲಿ ದೊರೆಯಬಹುದಾದ ಆರ್ಥಿಕ ಸಹಾಯಕ್ಕಾಗಿ ಅರ್ಜಿ ಸಲ್ಲಿಸಬಹುದು.

15. ಉಪ–ನಿಯಮ (9) ಅಡಿಯಲ್ಲಿನ ಅವಧಿ ಮುಗಿದ ನಂತರ, ಸ್ಥಳೀಯ ಪ್ರಾಧಿಕಾರವು ಶೌಚಗುಂಡಿಯನ್ನು ಹೊಂದಿರುವ ವ್ಯಕ್ತಿಯ ಜಾಗವನ್ನು ಪರಿಶೀಲಿಸುತ್ತದೆ.

16. ಶೌಚಗುಂಡಿಯನ್ನು ಹೊಂದಿರುವ ವ್ಯಕ್ತಿಯು ಅದನ್ನು ನೆಲಸಮ ಮಾಡಿಲ್ಲದೇ ಇದ್ದರೆ ಅಥವಾ ಅನಾರೋಗ್ಯಕರ ಶೌಚಾಲಯಗಳನ್ನು ಪರಿಪೂರ್ಣ ಶೌಚಾಲಯವನ್ನಾಗಿ ಪರಿವರ್ತಿಸದೇ ಇದ್ದರೆ, ಸ್ಥಳೀಯ ಅಧಿಕಾರವು ಅದನ್ನು ಕೆಡವಲು ಆದೇಶಿಸುತ್ತದೆ ಮತ್ತು ಅದಕ್ಕೆ ತಗಲುವ ವೆಚ್ಚವನ್ನು ಭೂಕಂದಾಯದ ಬಾಕಿ ಎಂಬುದಾಗಿ ಆತನಿಂದ ವಸೂಲಿ ಮಾಡುತ್ತದೆ.

## ಅಧ್ಯಾಯ–IV

## (ಮಲ ಹೊರುವವರು/ಮ್ಯಾನ್ಯುಯಲ್ ಸ್ಕ್ಯಾವೆಂಜರ್)ಗಳ ಸಮೀಕ್ಷೆ

**11.** 1. ಸ್ಥಳೀಯ ಪ್ರಾಧಿಕಾರವು (ಮ್ಯಾನ್ಯುಯಲ್ ಸ್ಕ್ಯಾವೆಂಜರ್) ಸಮೀಕ್ಷೆಯನ್ನು ನಡೆಸುವ ವ್ಯಕ್ತಿಗಳಿಗೆ ಸಮೀಕ್ಷೆ ನಡೆಸುವ ವಿಧಾನ ಮತ್ತು ರೀತಿಯ ಬಗ್ಗೆ ಮತ್ತು ಅವರಲ್ಲಿ ಮಲಹೊರುವ ಸಮಸ್ಯೆಯ ಬಗ್ಗೆ ಸಂವೇದನತ್ವವನ್ನು ಉಂಟು ಮಾಡುವ ಕುರಿತು ಸ್ಥಳೀಯ ಆಡಳಿತದಿಂದ ಸರಿಯಾದ ರೀತಿಯಲ್ಲಿ ಮತ್ತು ಸೂಕ್ತ ತರಬೇತಿ ನೀಡಲಾಗಿದೆ ಎಂದು ಖಚಿತಪಡಿಸಿಕೊಳ್ಳಬೇಕು.

2. ರಾಜ್ಯಮಟ್ಟದ ಸಮೀಕ್ಷಾ ಸಮಿತಿ ಮತ್ತು ಜಿಲ್ಲಾ ಮಟ್ಟದ ಸಮೀಕ್ಷಾ ಸಮಿತಿಯು ವಿವಿಧ ಹಂತಗಳಲ್ಲಿ ವಿಶೇಷವಾಗಿ ಶೌಚಗುಂಡಿ ಇರುವ ಎಲ್ಲ ಪ್ರದೇಶಗಳಲ್ಲಿ ಸೂಕ್ತ ಕಾರ್ಯಾಚರಣೆಗಳನ್ನು ನಡೆಸಬೇಕು.

3. ಇವುಗಳನ್ನು ಗುರುತಿಸುವ ಕಾರ್ಯದಲ್ಲಿ ಸ್ಥಳೀಯ ಅಧಿಕಾರಿಗಳು ಸ್ಥಳೀಯ ಸಮುದಾಯದ ಮುಖಂಡರನ್ನು ಅಥವಾ ಸಫಾಯಿ ಕರ್ಮಚಾರಿಗಳ ಅಥವಾ ನೈರ್ಮಲ್ಯ ಕಾರ್ಮಿಕರ ಹಿತಾಸಕ್ತಿಗಾಗಿ ಕೆಲಸ ಮಾಡುವ ಸರಕಾರೇತರ ಸಂಸ್ಥೆಯನ್ನು ಕೂಡಾ ಸೇರಿಸಿಕೊಳ್ಳಬೇಕು.

4. ಸ್ಥಳೀಯ ಪ್ರಾಧಿಕಾರವು ಜಾಗೃತಿ ಶಿಬಿರಗಳ ಮೂಲಕ ಸ್ವಯಂ ಘೋಷಣೆ ಕೇಂದ್ರಗಳಲ್ಲಿ ತಮ್ಮನ್ನು ಸ್ವತಃ ಘೋಷಿಸಿಕೊಳ್ಳಲು ಆಹ್ವಾನಿಸಬೇಕು ಮತ್ತು ಸ್ಥಳೀಯ ಅಡಳಿತದಿಂದ ತಿಳಿಸಲಾಗುವ ಸಮಯ ಮತ್ತು ಸ್ಥಳಗಳಲ್ಲಿ ಅವರ ವಿವರಗಳನ್ನು ಪರಿಶೀಲಿಸಬೇಕು.

5. ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಯನ್ನು, ಸರಕಾರೇತರ ಸಂಸ್ಥೆ ಅಥವಾ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯು ಒದಗಿಸಿದರೆ, ಅದನ್ನು ಗುರುತಿಸುವ ಸಲುವಾಗಿ ಸಂಪೂರ್ಣವಾಗಿ ಪರಿಶೀಲಿಸಲಾಗುತ್ತದೆ.

6. ಯಾವುದೇ ವ್ಯಕ್ತಿ ಅಥವಾ ಸಂಘಟನೆಯು ಒದಗಿಸಿದ ಶೌಚಗುಂಡಿಗಳ ಅಥವಾ ಸ್ಕ್ಯಾವೆಂಜರ್‌ಗಳ ಅಂಕಿ–ಅಂಶಗಳಲ್ಲಿ ವ್ಯತ್ಯಾಸ ಕಂಡು ಬಂದರೆ ಸ್ಥಳೀಯ ಆಡಳಿತವು ಎಣಿಕೆಗಾರರಿಗೆ (ಎನ್ಯುಮರೇಟರ್) ಶೌಚಗುಂಡಿಗಳನ್ನು ಸ್ವಚ್ಛಗೊಳಿಸುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಹೆಸರುಗಳನ್ನು ತಿಳಿಯಲು ಮನೆ ಮನೆ ಸಮೀಕ್ಷೆ ನಡೆಸುವಂತೆ ಆದೇಶಿಸುತ್ತಾರೆ.

7. ಸಫಾಯಿ ಕರ್ಮಚಾರಿಗಳು, ನೈರ್ಮಲ್ಯ ಕಾರ್ಮಿಕರು ಅಥವಾ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ವಸತಿ ಪ್ರದೇಶಗಳಿಗೆ ಸ್ಥಳೀಯ ಅಧಿಕಾರಿಗಳು ಭೇಟಿ ನೀಡುವ ಮೂಲಕ ಕೂಡಾ ಅವರನ್ನು ಗುರುತಿಸುವ ಪ್ರಯತ್ನಗಳನ್ನು ಮಾಡಬೇಕು.

8. ಎಣಿಕೆಗಾರರಿಂದ ಮಾಡಲ್ಪಟ್ಟ ಕೆಲಸದ ಮಾದರಿ ಪರೀಕ್ಷೆಗಳನ್ನು ಯಾದೃಚ್ಛಿಕ (ರ್‍ಯಾಂಡಮ್) ಆಯ್ಕೆಯ ಆಧಾರದ ಮೇಲೆ ಕೆಳಗೆ ಸೂಚಿಸಿರುವ ಮಟ್ಟಿಗೆ ಸ್ಥಳೀಯ ಪ್ರಾಧಿಕಾರದಿಂದ ನೇಮಿಸಲ್ಪಟ್ಟ ಮೇಲ್ವಿಚಾರಕರಿಂದ ನಡೆಸಲಾಗುತ್ತದೆ:–

(i) ಹಳ್ಳಿಗಳಲ್ಲಿ 100% ತಪಾಸಣೆ

(ii) ಶೌಚಗುಂಡಿಗಳು ಇರುವ ಮನೆಗಳು 1000ಕ್ಕಿಂತಲೂ ಕಡಿಮೆ ಇರುವ ನಗರಗಳು ಮತ್ತು ಪಟ್ಟಣಗಳಲ್ಲಿ 100% ತಪಾಸಣೆಗಳನ್ನು ನಡೆಸಲಾಗುತ್ತದೆ.

(iii) ಶೌಚಗುಂಡಿಗಳು ಇರುವ 1000ದಿಂದ9999 ಮನೆಗಳನ್ನು ಹೊಂದಿರುವ ಪಟ್ಟಣಗಳು ಅಥವಾ ನಗರಗಳಲ್ಲಿ, ಪ್ರತಿ ಎಣಿಕೆಗಾರನಿಂದ ಗುರುತಿಸಲ್ಪಟ್ಟ ಮನೆಗಳಲ್ಲಿ 50 ಪ್ರತಿಶತದಷ್ಟು ಮನೆಗಳನ್ನು ಪರಿಶೀಲಿಸಲಾಗುತ್ತದೆ.

(iv) ಶೌಚಗುಂಡಿಗಳು ಇರುವ ಮನೆಗಳು 1000ಕ್ಕಿಂತ ಜಾಸ್ತಿ ಇರುವ ನಗರಗಳು ಮತ್ತು ಪಟ್ಟಣಗಳಲ್ಲಿ ಪ್ರತಿ ಎಣಿಕೆಗಾರನಿಂದ ಘೋಷಿಸಿದ ಮನೆಗಳಲ್ಲಿ 33% ದಷ್ಟು ಮನೆಗಳನ್ನು ಪರಿಶೀಲಿಸಬೇಕು.

(v) (iii) ಮತ್ತು (iv) ವಿಭಾಗಗಳಲ್ಲಿ, ಯಾವುದೇ ಎಣಿಕೆಗಾರ ಮಾಡಿದ ಕೆಲಸದ ಮಾದರಿ ಪರಿಶೀಲನೆಯಲ್ಲಿ10% ಕ್ಕಿಂತಲೂ ಹೆಚ್ಚು ದೋಷ ಬಹಿರಂಗವಾದರೆ, ಅವರ ಕೆಲಸದ 100% ಪರಿಶೀಲನೆಯನ್ನು ಮೇಲ್ವಿಚಾರಕನು ಮಾಡಬೇಕು.

9. ಕಾಯ್ದೆಯ ಅನುಸಾರವಾಗಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ತಾತ್ಕಾಲಿಕ ಪಟ್ಟಿಗಳಲ್ಲಿ ಯಾವುದೇ ಹೆಸರಿನ ಸೇರ್ಪಡೆ ಅಥವಾ ಹೊರಗಿಡುವಿಕೆಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಆಕ್ಷೇಪಣೆಯಿದ್ದಲ್ಲಿ, ತಾತ್ಕಾಲಿಕ ಪ್ರಕಟಣೆಯನ್ನು

ಮಾಡಿದ ದಿನದಿಂದ ಹದಿನೈದು ದಿನಗಳ ಒಳಗೆ, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದಿಂದ ನಿರ್ದಿಷ್ಟಪಡಿಸಲಾದ ನಿಗದಿತ ಅರ್ಜಿ ನಮೂನೆಯಲ್ಲಿ ಆಕ್ಷೇಪಣೆಯನ್ನು ಸಲ್ಲಿಸಬಹುದು.

10. ಕಾಯ್ದೆಯ ಅಡಿಯಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮೀಕ್ಷೆ ಮಾಡುವಾಗ ಇದರ ಪ್ರಕಟಣೆಯ ವಿಧಾನವನ್ನು ಸಹ ಸ್ಥಳೀಯ ಅಧಿಕಾರಿಗಳು ತಿಳಿಸಬೇಕು.

11. ಸ್ಥಳೀಯ ಆಡಳಿತವು ಆಕ್ಷೇಪಣೆಗಳನ್ನು ವಿಚಾರಣೆಗೆ ಒಳಪಡಿಸಬೇಕು ಮತ್ತು ಅದರ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಯನ್ನು ಅಂತಿಮಗೊಳಿಸಲು ಅಗತ್ಯವಿದ್ದರೆ ಸಭೆಯನ್ನು ಕರೆಯಬೇಕು.

12. ಒಬ್ಬ ವ್ಯಕ್ತಿ ತಾನು ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಎಂದು ಸ್ವಯಂ–ಘೋಷಣೆ ಮಾಡಲು ಹಕ್ಕುದಾರನಾಗಿರುವುದನ್ನು ಹೊರತುಪಡಿಸಿ, ಸ್ಥಳೀಯ ಪ್ರಾಧಿಕಾರವು ಅಂತಿಮ ಪಟ್ಟಿಯನ್ನು ಪ್ರಕಟಿಸಿದ ನಂತರ ಪಟ್ಟಿಯಲ್ಲಿ ಸೇರಿಸಬೇಕು ಅಥವಾ ಹೊರಗಿಡಬೇಕು ಎಂಬ ಯಾವುದೇ ಹಕ್ಕು ಅಥವಾ ಆಕ್ಷೇಪಣೆಯನ್ನು ಪರಿಗಣಿಸಲಾಗುವುದಿಲ್ಲ.

13. ಕ್ಲೈಮ್‌ಗಳು ಮತ್ತು ಆಕ್ಷೇಪಣೆಗಳ ತನಿಖೆ ಮಾಡಲು, ತಹಶೀಲ್ದಾರ್ ಅಥವಾ ಬ್ಲಾಕ್ ಅಭಿವೃದ್ಧಿ ಅಧಿಕಾರಿಗಿಂತ ಕಡಿಮೆ ಹುದ್ದೆಯಲ್ಲಿಲ್ಲದ ಒಬ್ಬ ಅಧಿಕಾರಿಯನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್ ನಿಗದಿಪಡಿಸಬೇಕು ಮತ್ತು ಗೊತ್ತುಪಡಿಸಿದ ತನಿಖಾಧಿಕಾರಿಯು ನಡೆಸಿದ ತನಿಖೆ ಮತ್ತು ವಿವರಗಳಲ್ಲಿ ಈ ಕೆಳಗಿನವುಗಳನ್ನು ಖಾತರಿಪಡಿಸಬೇಕು–

(i) ಹಕ್ಕುದಾರ ಅಥವಾ ಆಕ್ಷೇಪಣೆ ಮಾಡುವವರಿಗೆ ಅವರನ್ನು ಆಲಿಸಲು ಸಾಕಷ್ಟು ಅವಕಾಶ ನೀಡಲಾಗುತ್ತದೆ

(ii) ಉಪ–ನಿಯಮ (15) ಅಡಿಯಲ್ಲಿ ಒದಗಿಸಿದಂತೆ ಸಾರಾಂಶ ವಿಚಾರಣೆಯ ದಿನಾಂಕದ ಬಗ್ಗೆ ಹಕ್ಕುದಾರ ಅಥವಾ ಆಕ್ಷೇಪಣೆಗಾರನಿಗೆ ಏಳು ದಿನಗಳಿಗಿಂತ ಕಡಿಮೆಯಿಲ್ಲದ ನೋಟೀಸನ್ನು ನೀಡಲಾಗಿದೆ;

(iii) ಉಪ–ನಿಯಮ (14) ಅಡಿಯಲ್ಲಿ ಒದಗಿಸಿದಂತೆ, ಸಾಕ್ಷ್ಯದ ದಾಖಲೆಗಳೊಂದಿಗೆ, ಯಾವುದಾದರೂ ಇದ್ದಲ್ಲಿ, ತನ್ನ ಹಕ್ಕನ್ನು ಬೆಂಬಲಿಸಲು ಹಕ್ಕುದಾರ ಅಥವಾ ಆಕ್ಷೇಪಣೆಗಾರನಿಗೆ ಅನುಮತಿಸಲಾಗುವುದು;

(iv) ಹಕ್ಕುದಾರ ಅಥವಾ ಆಕ್ಷೇಪಣೆಗಾರರು ವಕೀಲರು, ಸರ್ಕಾರೇತರ ಸಂಸ್ಥೆ ಅಥವಾ ಸ್ನೇಹಿತರಿಂದ ಪ್ರತಿನಿಧಿಸಲ್ಪಡುವ ಹಕ್ಕನ್ನು ಹೊಂದಿರುತ್ತಾರೆ; ಮತ್ತು

(v) ಉಪ–ನಿಯಮ (20) ಅಡಿಯಲ್ಲಿ ಒದಗಿಸಿದಂತೆ ಗೊತ್ತುಪಡಿಸಿದ ಅಧಿಕಾರಿಯಿಂದ ಅಂಗೀಕರಿಸಲ್ಪಟ್ಟ ಆದೇಶದ ಪ್ರತಿಯನ್ನು ಹಕ್ಕುದಾರ ಅಥವಾ ಆಕ್ಷೇಪಣೆಗಾರನಿಗೆ ನೀಡಲಾಗುವುದು.

14. ಈ ನಿಯಮಗಳ ಅಡಿಯಲ್ಲಿ ಸಲ್ಲಿಸುವ ಹಕ್ಕು ಮತ್ತು ಆಕ್ಷೇಪಣೆಗಳಿಗೆ ಅರ್ಜಿ ಸಲ್ಲಿಸುವ ಅರ್ಜಿದಾರರಿಗೆ ಗೊತ್ತುಪಡಿಸಿದ ಸ್ಥಳದಲ್ಲಿ ಹಾಗೂ ಸ್ಥಳೀಯ ಪ್ರಾಧಿಕಾರದ ಮೂಲಕ ಕೂಡಾ ಬೇಡಿಕೆಯ ಮೇಲೆ ಅರ್ಜಿಯನ್ನು ಉಚಿತವಾಗಿ ಕೊಡಬೇಕು ಹಕ್ಕುದಾರ ಅಥವಾ ಆಕ್ಷೇಪಣೆಗಾರ ದಾಖಲೆಯ ಸಾಕ್ಷಿಗಳೊಂದಿಗೆ ತನ್ನ ಹಕ್ಕನ್ನು ಬೆಂಬಲಿಸಬಹುದು.

15. ಸ್ಥಳೀಯ ಪ್ರಾಧಿಕಾರವು ಗೊತ್ತುಪಡಿಸಿದ ಅಧಿಕಾರಿಗಳ ಮೂಲಕ ಸಂಕ್ಷಿಪ್ತ ವಿಚಾರಣೆಗಳನ್ನು ನಡೆಸಬೇಕು.

16. ಕ್ಲೈಮ್ ಪರಿಶೀಲಿಸಲು ಗೊತ್ತುಪಡಿಸಿದ ಅಧಿಕಾರಿಯು ಅಗತ್ಯವಿದ್ದಲ್ಲಿ ಪುನಃ ಪರಿಶೀಲನೆಗೆ ಆದೇಶಿಸಬಹುದು.

17. ಸಂಕ್ಷಿಪ್ತ ವಿಚಾರಣೆ ಮತ್ತು ಮತ್ತಷ್ಟು ಪರಿಶೀಲನೆಯ ನಂತರ (ಆದೇಶಿಸಿದರೆ), ಅಧಿಕಾರಿ ಸಂದರ್ಭಕ್ಕೆ ತಕ್ಕಂತೆ ಹಕ್ಕು ಅಥವಾ ಆಕ್ಷೇಪಣೆಯನ್ನು ಸ್ವೀಕರಿಸಿ ಅಥವಾ ತಿರಸ್ಕರಿಸಿ ಸೂಕ್ತ ಆದೇಶ ಹೊರಡಿಸುತ್ತಾರೆ ಮತ್ತು ಆದೇಶದ ನಕಲನ್ನು ಸಂಬಂಧಪಟ್ಟ ವ್ಯಕ್ತಿಗೆ ನೀಡಲಾಗುವುದು.

18. ಹಕ್ಕು ಮತ್ತು ಆಕ್ಷೇಪಣೆಗಳನ್ನು ಪರಿಹರಿಸಿದ ನಂತರ ಅಧಿಕಾರಿಯು ಕರಡು (ಡ್ರಾಫ್ಟ್) ಪಟ್ಟಿಯಲ್ಲಿ ಅಗತ್ಯವಾದ ತಿದ್ದುಪಡಿಯನ್ನು ಮಾಡಬೇಕು ಮತ್ತು ಜಿಲ್ಲಾಮಟ್ಟದ ಸಮೀಕ್ಷಾ ಸಮಿತಿಗೆ ಪರಿಗಣನೆಗಾಗಿ ಕಳುಹಿಸಬೇಕು.

19. ಜಿಲ್ಲಾ ಮಟ್ಟದ ಸಮೀಕ್ಷಾ ಸಮಿತಿಯು ಪ್ರತಿಯೊಂದೂ ಸ್ಥಳೀಯ ಪ್ರಾಧಿಕಾರ, ಪಟ್ಟಣದಿಂದ ಪಡೆದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಯನ್ನು ಒಟ್ಟುಗೂಡಿಸಬೇಕು ಮತ್ತು ಜಿಲ್ಲೆಯಲ್ಲಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಯನ್ನು ಮಾಡಿ ಅದನ್ನು ಜಿಲ್ಲಾಧಿಕಾರಿಯ ಮೂಲಕ ರಾಜ್ಯ ಸರಕಾರಕ್ಕೆ ಕಳುಹಿಸಬೇಕು.

20. ರಾಜ್ಯ ಸರ್ಕಾರವು ವಿವಿಧ ಜಿಲ್ಲೆಗಳಿಂದ ಸ್ವೀಕರಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಗಳನ್ನು ಸಂಗ್ರಹಿಸಿ, ರಾಜ್ಯದಲ್ಲಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕ್ರೋಢೀಕೃತ ಪಟ್ಟಿಯನ್ನು ತಯಾರಿಸುತ್ತದೆ.

21. ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಆಗಿ ಕೆಲಸ ಮಾಡುವ ಯಾವುದೇ ವ್ಯಕ್ತಿಯು ಸ್ಥಳೀಯ ಪ್ರಾಧಿಕಾರವು ನಡೆಸುವ ಸಮೀಕ್ಷೆಯಲ್ಲಿ ಸ್ವಯಂ ಘೋಷಿಸಿಕೊಳ್ಳಬಹುದು ಅಥವಾ ನಂತರ ಯಾವುದೇ ಸಮಯದಲ್ಲಿ, ಸ್ಥಳೀಯ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಅಥವಾ ಅವರ ಪರವಾಗಿ ಅವರಿಂದ ಪ್ರಮಾಣೀಕರಿಸಲ್ಪಟ್ಟ ಯಾವುದೇ ಇತರ ಅಧಿಕಾರಿಗಳಿಗೆ, ನಿಗದಿತ ಪ್ರೊಫಾರ್ಮಾದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಎಂದು ಗುರುತಿಸಲು ಅರ್ಜಿ ಸಲ್ಲಿಸಬಹುದು. ಅನುಬಂಧ–II ರಲ್ಲಿ ಅರ್ಜಿಯ ನಮೂನೆಯನ್ನು ನೀಡಲಾಗಿದೆ.

22. ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ನ್ನು ಗುರುತಿಸಲು ಕನಿಷ್ಠ ವಯಸ್ಸಿನ ಮಿತಿಯಿಲ್ಲ ಮತ್ತು ಜಾತಿ ಅಥವಾ ಧರ್ಮ ಅಥವಾ ಆದಾಯ ಅಥವಾ ಲಿಂಗ ಆಧಾರಿತ ಯಾವುದೇ ನಿರಾಕರಣೆಯಿಲ್ಲ.

23. ಉಪ–ನಿಯಮ (22)ನ ಉದ್ದೇಶಕ್ಕಾಗಿ, ಒಬ್ಬ ವ್ಯಕ್ತಿಯು ಕಾಯ್ದೆ ಜಾರಿಗೊಳ್ಳುವುದಕ್ಕೆ ಮೊದಲು ಅಥವಾ ನಂತರ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಆಗಿ ಸತತವಾಗಿ ಮೂರು ತಿಂಗಳಿಗೆ ಕಡಿಮೆ ಇಲ್ಲದ ಅವಧಿಗೆ ಕೆಲಸ ಮಾಡಿರಬೇಕು.

24. ಮೇಲ್ವಿಚಾರಕರಿಂದ ಪರಿಶೀಲಿಸಲ್ಪಟ್ಟಂತೆ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ತಾತ್ಕಾಲಿಕ ಪಟ್ಟಿಯನ್ನು ಸ್ಥಳೀಯ ಪ್ರಾಧಿಕಾರವು ಸ್ಥಳೀಯ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಬೇಕು ಮತ್ತು ಅದರ ಸ್ವಂತ ಕಚೇರಿಯಲ್ಲಿ ಮತ್ತು ಸೂಕ್ತವೆಂದು ಪರಿಗಣಿಸಿದ ಇತರ ಸ್ಥಳಗಳಲ್ಲಿ ಪ್ರದರ್ಶಿಸಬೇಕು.

25. ತಾತ್ಕಾಲಿಕ ಪಟ್ಟಿಯ ಒಂದು ನಕಲು ಪ್ರತಿ ಸ್ಥಳೀಯ ಪ್ರಾಧಿಕಾರದ ಸದಸ್ಯರಿಗೆ ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಅಥವಾ ಸಫಾಯಿ ಕರ್ಮಚಾರಿಗಳು ಅಥವಾ ನೈರ್ಮಲ್ಯ ಕಾರ್ಯಕರ್ತರ ಸಮುದಾಯದವರಿಗೆ ಲಭ್ಯವಾಗುವಂತೆ ಮಾಡಬೇಕು.

26. ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸುವಾಗ, ಸ್ಥಳೀಯ ಅಧಿಕಾರಿಗಳು ಸಾರ್ವಜನಿಕರಿಗೆ, ಪಟ್ಟಿಗೆ ಸಂಬಂಧಿಸಿದಂತೆ 15 ದಿನಗಳಿಗಿಂತ ಕಡಿಮೆ ಇಲ್ಲದ ಅವಧಿಯೊಳಗೆ, ಸ್ಥಳೀಯ ಪ್ರಾಧಿಕಾರವು ಸೂಚಿಸಿದ ಒಂದು ಅರ್ಜಿ ನಮೂನೆಯಲ್ಲಿ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಕರೆ ನೀಡಬೇಕು.

27. ಜಿಲ್ಲಾಮಟ್ಟದ ಸಮೀಕ್ಷಾ ಸಮಿತಿಯಿಂದ ಅಂತಿಮ ಪಟ್ಟಿಯ ಅನುಮೋದನೆಗೊಂಡ ನಂತರ, ಅದು ಸಂಬಂಧಪಟ್ಟ ಕಚೇರಿಗಳ ನೋಟಿಸ್ ಬೋರ್ಡ್‌ಗಳಲ್ಲಿ ಪ್ರಕಟವಾಗಬೇಕು ಮತ್ತು ಅಂತಿಮ ಪಟ್ಟಿಯನ್ನು ಜಿಲ್ಲಾ ಆಡಳಿತ ಮತ್ತು ರಾಜ್ಯ ಸರಕಾರದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು.

**12.** ಗುರುತಿಸಿದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಲ್ಲಿ, ಕುಟುಂಬದಿಂದ ಒಬ್ಬರು, ತಕ್ಷಣವೇ ರೂ 40,000/– ರೂಪಾಯಿ ನಗದು ನೆರವು ಪಡೆಯಲು ಅರ್ಹರಾಗುತ್ತಾರೆ. ಫಲಾನುಭವಿಗೆ ಗರಿಷ್ಠ ರೂ.7,000/– ದವರೆಗೆ ಮಾಸಿಕ ಕಂತುಗಳಲ್ಲಿ ಹಣ ತೆಗೆದುಕೊಳ್ಳಲು ಅವಕಾಶ ನೀಡಲಾಗುತ್ತದೆ.

# ಅಧ್ಯಾಯ–V

## ಪರಿಶೀಲನಾಧಿಕಾರಿಯ (ಇನ್ಸ್‌ಪೆಕ್ಟರ್) ಅಧಿಕಾರ

**13.** ಕಾಯ್ದೆಯ ಖಂಡ 5, ಖಂಡ 6 ಅಥವಾ 7ರ ಉಪ–ಖಂಡ (2)ರ ಅಡಿಯಲ್ಲಿ ವ್ಯಾಖ್ಯಾನಿಸಿದಂತೆ ಕಾನೂನಿನ ಉಲ್ಲಂಘನೆ ನಡೆದಿದೆ, ಅಥವಾ ನಡೆಯುತ್ತಿದೆ ಅಥವಾ ಸಂಭವಿಸುವ ಸಾಧ್ಯತೆಯಿದೆ ಎಂದು ಪರಿಶೀಲನಾಧಿಕಾರಿಯು ನಂಬಲು ಕಾರಣವನ್ನು ಹೊಂದಿದ್ದರೆ, ಆತನು ತಪಾಸಣೆ, ತನಿಖೆ ಅಥವಾ ವಿಚಾರಣೆಯನ್ನು ಮಾಡಬಹುದು.

1. ಕಾನೂನಿನ ಉಲ್ಲಂಘನೆಯು ಒಂದು ಶೌಚಗುಂಡಿಯ ನಿರ್ಮಾಣ, ನಿರ್ವಹಣೆ ಅಥವಾ ಬಳಕೆಗೆ ಸಂಬಂಧಪಟ್ಟಿದ್ದರೆ, ಅದನ್ನು ಪರಿಶೀಲನಾಧಿಕಾರಿಯು (ಇನ್ಸ್‌ಪೆಕ್ಟರ್) ಸ್ಥಳೀಯ ಪ್ರಾಧಿಕಾರಕ್ಕೆ ವರದಿ ಮಾಡಬೇಕಾಗುತ್ತದೆ, ನಂತರ ಪ್ರಾಧಿಕಾರವು ಕಾಯ್ದೆಯ ನಿಬಂಧನೆಗಳ ಪ್ರಕಾರ ಕ್ರಮ ತೆಗೆದುಕೊಳ್ಳತಕ್ಕದ್ದು.

2. ಕಾನೂನಿನ ಉಲ್ಲಂಘನೆಯು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಉದ್ಯೋಗಕ್ಕೆ ಸಂಬಂಧಪಟ್ಟರೆ, ಪರಿಶೀಲನಾಧಿಕಾರಿಯು (ಇನ್ಸ್‌ಪೆಕ್ಟರ್) ವರದಿಯನ್ನು ಸ್ಥಳೀಯ ಪ್ರಾಧಿಕಾರಕ್ಕೆ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ಕಳುಹಿಸಬೇಕು.

3. ಸಮೀಕ್ಷೆ ಮಾಡುವಾಗ ಅಥವಾ ನಂತರ ಯಾವುದೇ ಸಮಯದಲ್ಲಿ ಒಬ್ಬ ವ್ಯಕ್ತಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಕೆಲಸ ಮಾಡುತ್ತಿದ್ದಾನೆಂದು ಕಂಡುಬಂದಲ್ಲಿ ಆ ವ್ಯಕ್ತಿಯ ಹೆಸರನ್ನು ಅಂತಿಮ ಪಟ್ಟಿಯಲ್ಲಿ ಸೇರಿಸಲು ಸ್ಥಳೀಯ ಪ್ರಾಧಿಕಾರವು ಕ್ರಮ ಕೈಗೊಳ್ಳಬೇಕು, ಮತ್ತು ಅಂತಿಮ ಪಟ್ಟಿಯಲ್ಲಿ ಹೆಸರನ್ನು ಸೇರಿಸಿದ ನಂತರ, ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಅವರ ಪುನರ್ವಸತಿ ಮಾಡಬೇಕು.

4. ಒಳಚರಂಡಿ ಅಥವಾ ರೊಚ್ಚು ತೊಟ್ಟಿ (ಸೆಪ್ಟಿಕ್ ಟ್ಯಾಂಕ್) ಗಳ ಶುಚಿಗೊಳಿಸುವಿಕೆಯಂತಹ ಅಪಾಯಕಾರಿ ಕೆಲಸಕ್ಕೆ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಅವಲಂಬಿಸಲಾಗುತ್ತಿದೆ ಎಂದು ಪರಿಶೀಲನಾಧಿಕಾರಿಗೆ ಗೋಚರಿಸಿದರೆ, ಪರಿಶೀಲನಾಧಿಕಾರಿ ಇಂತಹ ಅಪಾಯಕಾರಿ ಶುಚಿಗೊಳಿಸುವಿಕೆಯನ್ನು ಮುಂದೂಡಬೇಕು ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ವಿಷಯವನ್ನು ವರದಿ ಮಾಡಬೇಕು.

5. ಪರಿಶೀಲನಾಧಿಕಾರಿಗೆ, ತನ್ನ ವ್ಯಾಪ್ತಿಯಲ್ಲಿ ಅಂತಹ ಯಾವುದೇ ಸ್ಥಳಗಳನ್ನು ಒಳಚರಂಡಿ ಅಥವಾ ಸೆಪ್ಟಿಕ್ ತೊಟ್ಟಿಗಳ ಅಪಾಯಕಾರಿ ಶುಚಿತ್ವಕ್ಕಾಗಿ ಬಳಸಲಾಗಿದೆ, ಬಳಸಲಾಗುತ್ತಿದೆ ಅಥವಾ ಬಳಸುವ ಸಾಧ್ಯತೆಯಿದೆ ಎಂದು ನಂಬಲು ಯಾವುದೇ ಕಾರಣಗಳು ಇದ್ದಾಗ, ಅವರು ಅಂತಹ ಯಾವುದೇ ಕಟ್ಟಡ, ಸೈಟ್, ಸ್ಥಳ ಅಥವಾ ಆವರಣವನ್ನು ಪರಿಶೀಲಿಸಬಹುದು.

6. ಶೌಚ ಗುಂಡಿಗಳ ಅಥವಾ ಒಳಚರಂಡಿ ಅಥವಾ ಸೆಪ್ಟಿಕ್ ಟ್ಯಾಂಕ್‌ನ ಅಪಾಯಕಾರಿ ಶುಚಿಗೊಳಿಸುವಿಕೆಗೆ ಸಂಬಂಧಿಸಿದಂತೆ ಯಾವುದೇ ತಪಾಸಣೆ ಅಥವಾ ವಿಚಾರಣೆಯ ಉದ್ದೇಶಕ್ಕಾಗಿ ಅಗತ್ಯವೆಂದು ಪರಿಗಣಿಸಬಹುದಾದ ಯಾವುದೇ ಸಾಕ್ಷ್ಯವನ್ನು ಇನ್ಸ್‌ಪೆಕ್ಟರ್ ಸ್ಥಳದಲ್ಲೇ ಅಥವಾ ಯಾವುದೇ ವ್ಯಕ್ತಿಯಿಂದ ತೆಗೆದುಕೊಳ್ಳಬಹುದು. ಅಂತಹ ವ್ಯಕ್ತಿಯನ್ನು ಯಾವುದೇ ಪ್ರಶ್ನೆಗೆ ಉತ್ತರಿಸಲು ಅಥವಾ ಆತನ ಮೇಲೆ ದೋಷಾರೋಪಣೆ ಮಾಡಲು ಸಾಧ್ಯವಾಗುವಂತಹ ಪುರಾವೆಗಳನ್ನು ನೀಡುವಂತೆ ಬಲವಂತ ಮಾಡಬಾರದು.

7. ಪರಿಶೀಲನಾಧಿಕಾರಿಯು ಈ ನಿಯಮಗಳ ಅಡಿಯಲ್ಲಿ ಯಾವುದೇ ಪರೀಕ್ಷೆ ಅಥವಾ ವಿಚಾರಣೆಯ ಉದ್ದೇಶಕ್ಕಾಗಿ ಅಗತ್ಯವೆಂದು ಪರಿಗಣಿಸಬಹುದಾದ ಯಾವುದೇ ಛಾಯಾಚಿತ್ರ, ವಿಡಿಯೋ ಕ್ಲಿಪ್, ಮಾದರಿ, ರೆಕಾರ್ಡ್ ಅಥವಾ ಎಲೆಕ್ಟ್ರಾನಿಕ್ ಸಾಧನವನ್ನು ಒಳಗೊಂಡಂತೆ ಯಾವುದೇ ಸಾಧನವನ್ನು ಬಳಸಿ ಯಾವುದೇ ವಿವರಗಳನ್ನು ತೆಗೆದುಕೊಳ್ಳಬಹುದು ಅಥವಾ ಸ್ಕೆಚ್ ಅನ್ನು ರಚಿಸಬಹುದು.

8. ಸ್ಥಳೀಯ ಪ್ರಾಧಿಕಾರ, ವ್ಯಕ್ತಿ ಅಥವಾ ಒಂದು ಸಂಸ್ಥೆಯು ಅಪಾಯಕಾರಿ ಶುಚಿಗೊಳಿಸುವ ಕೆಲಸಕ್ಕೆ ಒಬ್ಬ ವ್ಯಕ್ತಿಯನ್ನು ನೇಮಕ ಮಾಡಿರುವುದು ಇನ್ಸ್‌ಪೆಕ್ಟರ್‌ಗೆ ಕಂಡು ಬಂದರೆ ತಕ್ಷಣವೇ ಶುಚಿಗೊಳಿಸುವ ಕೆಲಸವನ್ನು ನಿಲ್ಲಿಸುವಂತೆ ಅಂತಹ ಪ್ರಾಧಿಕಾರ, ವ್ಯಕ್ತಿ ಅಥವಾ ಸಂಸ್ಥೆಗೆ ಸೂಚಿಸತಕ್ಕದ್ದು ಮತ್ತು ಈ ನಿಯಮಗಳಿಗೆ ಅನುಬಂಧ– III ರಲ್ಲಿ ಕೊಟ್ಟಿರುವ ನಮೂನೆಯಲ್ಲಿ ಲಿಖಿತ ನೋಟೀಸನ್ನು ನೀಡಬೇಕು.

## ಅಧ್ಯಾಯ–VI

## ರಾಜ್ಯ ಉಸ್ತುವಾರಿ ಸಮಿತಿ

14 1. ಅಧ್ಯಕ್ಷರು ನಿಗದಿಪಡಿಸಿದ ದಿನ ಹಾಗೂ ಸಮಯಗಳಲ್ಲಿ ಕನಿಷ್ಠ ಆರು ತಿಂಗಳಿಗೊಮ್ಮೆ ರಾಜ್ಯ ಉಸ್ತುವಾರಿ ಸಮಿತಿಯು ಸಭೆ ನಡೆಸಬೇಕು.

2. ಸಭೆಗಳು ಸಾಮಾನ್ಯವಾಗಿ ರಾಜ್ಯದ ಪ್ರಧಾನ ಕಾರ್ಯಾಲಯಗಳಲ್ಲಿ ನಡೆಯಲಿವೆ.

3. ಯಾವುದೇ ಇತರ ಸ್ಥಳಗಳಲ್ಲಿ ಸಭೆ ನಡೆಸುವುದು ಅವಶ್ಯಕವೆಂದು ಸಮಿತಿಗೆ ಕಂಡುಬಂದರೆ, ಅದರ ಕಾರಣಗಳನ್ನು ಲಿಖಿತ ರೂಪದಲ್ಲಿ ದಾಖಲಿಸಿ, ಅಂತಹ ಸಭೆಗಳನ್ನು ರಾಜ್ಯದೊಳಗಿನ ಇತರ ಸ್ಥಳಗಳಲ್ಲಿ ನಡೆಸಬಹುದು.

4. ಸದಸ್ಯ–ಕಾರ್ಯದರ್ಶಿಗಳು ಸಮಿತಿಯ ಎಲ್ಲ ಸದಸ್ಯರಿಗೆ ಕನಿಷ್ಟ ಹತ್ತು ದಿನಗಳ ಸೂಚನೆ ನೀಡಬೇಕು ಮತ್ತು ಸಭೆಯಲ್ಲಿ ಪರಿಗಣಿಸಬೇಕಾದ ವ್ಯವಹಾರದ ಪಟ್ಟಿಯನ್ನು ಸಹ ಕಳುಹಿಸಬೇಕು.

5. ಅಧ್ಯಕ್ಷರ ಅನುಮತಿಯಿಲ್ಲದೇ, ವ್ಯವಹಾರಗಳ ಪಟ್ಟಿಯಲ್ಲಿಲ್ಲದ ಯಾವ ವ್ಯವಹಾರವನ್ನೂ ಪರಿಗಣಿಸಬೇಕಾದ್ದಿಲ್ಲ.

6. ಅಧ್ಯಕ್ಷರು ತಾನು ಹಾಜರಿರುವ ಪ್ರತಿಯೊಂದು ಸಭೆಯ ಅಧ್ಯಕ್ಷತೆಯನ್ನು ವಹಿಸುತ್ತಾರೆ ಮತ್ತು ಅವರ ಅನುಪಸ್ಥಿತಿಯಲ್ಲಿ, ಯಾವುದೇ ಅತ್ಯಂತ ಹಿರಿಯ ಸದಸ್ಯರು ಸಭೆಯ ಅಧ್ಯಕ್ಷತೆ ವಹಿಸಬೇಕೆಂದು ಸದಸ್ಯರಿಂದ ಚುನಾಯಿತರಾಗುತ್ತಾರೆ.

7. ಸಮಿತಿಯ ಒಟ್ಟು ಸದಸ್ಯರಲ್ಲಿ ಕನಿಷ್ಠ ಮೂರನೇ ಒಂದು ಭಾಗ ಸಭೆಯಲ್ಲಿ ಹಾಜರಿಲ್ಲದೇ ಯಾವುದೇ ಪ್ರಸ್ತಾವವನ್ನು ಮುಂದುವರೆಸುವಂತಿಲ್ಲ.

   ಯಾವುದೇ ಸಭೆಯಲ್ಲಿ, ಮೂರನೇ ಒಂದು ಭಾಗಕ್ಕಿಂತ ಕಡಿಮೆ ಸದಸ್ಯರಿದ್ದಲ್ಲಿ, ಆಗ ಅಧ್ಯಕ್ಷರು ಹಾಜರಿರುವ ಸದಸ್ಯರಿಗೆ ತಿಳಿಸಿ ಮತ್ತು ಇತರ ಸದಸ್ಯರಿಗೆ ರಿಜಿಸ್ಟರ್ಡ್ ನೋಟೀಸು ಕಳುಹಿಸುವ ಮೂಲಕ ಸಭೆಯ ದಿನಾಂಕದಿಂದ ಏಳು ದಿನಗಳ ಒಳಗಿಲ್ಲದ ದಿನಾಂಕಕ್ಕೆ ಸಭೆಯನ್ನು ಮುಂದೂಡಬಹುದು.

8. ಮುಂದೂಡಲ್ಪಟ್ಟ ಸಭೆಯಲ್ಲಿ ಅವಶ್ಯಕ ಸದಸ್ಯರ ಸಂಖ್ಯೆಯನ್ನು (ಕೋರಮ್) ಲೆಕ್ಕಿಸದೇ ಪ್ರಸ್ತಾವವನ್ನು ಇತ್ಯರ್ಥಮಾಡಬಹುದು.

9. ಪ್ರತಿ ಸಭೆಯ ಕಾರ್ಯಾಲಾಪಗಳನ್ನು ಹಾಜರಿರುವ ಎಲ್ಲಾ ಸದಸ್ಯರಿಗೂ ವಿತರಿಸಲಾಗುತ್ತದೆ ಹಾಗೂ ಸಮಿತಿಯ ಮುಂದಿನ ಸಭೆಯಲ್ಲಿ ಅದನ್ನು ಓದಿ ದೃಢೀಕರಿಸಲಾಗುತ್ತದೆ, ಹಾಗೂ ಇದಕ್ಕೆ ಅಧ್ಯಕ್ಷರಿಂದ ಸಹಿ ಹಾಕಲಾಗುತ್ತದೆ.

10. ಸಂಕ್ಷಿಪ್ತ ವರದಿಯನ್ನು ಸಂಕ್ಷಿಪ್ತ ವರದಿ ಪುಸ್ತಕದಲ್ಲಿ ಶಾಶ್ವತ ದಾಖಲೆಯಾಗಿ ದಾಖಲಿಸಲಾಗುತ್ತದೆ.

11. ಸಂಕ್ಷಿಪ್ತ ವರದಿಯ ಒಂದು ಪ್ರತಿಯನ್ನು ಕೇಂದ್ರ ಉಸ್ತುವಾಗಿ ಸಮಿತಿಯ ಅವಗಾಹನೆಗಾಗಿ ಕೇಂದ್ರ ಸರಕಾರಕ್ಕೆ ಒಪ್ಪಿಸಲಾಗುತ್ತದೆ.

## ಪ್ರಥಮ ಚಿಕಿತ್ಸೆ ಸೌಲಭ್ಯಗಳು

(ಎ). ಕೆಲಸದ ಸಮಯಗಳಲ್ಲಿ ಸುಲಭವಾಗಿ ಕೈಗೆಟಕುವಂತೆ ಪ್ರತಿಯೊಂದು ಜಾಗದಲ್ಲೂ ಪ್ರತಿ 150 ಸಿಬ್ಬಂದಿಗೆ ಒಂದು ಪ್ರಥಮ ಚಿಕಿತ್ಸೆ ಪೆಟ್ಟಿಗೆಗೆ ಕಡಿಮೆಯಿಲ್ಲದಂತೆ ಅದನ್ನು ಇರಿಸಿ ನಿರ್ವಹಿಸಬೇಕು.

ಎ) ಪ್ರಥಮ ಚಿಕಿತ್ಸೆ ಪೆಟ್ಟಿಗೆಯು ಬಿಳಿ ಬಣ್ಣದಾಗಿದ್ದು, ಅದರ ಮೇಲೆ ರೆಡ್‌ಕ್ರಾಸ್‌ನಿಂದ ಗುರುತಿಸಬೇಕು ಹಾಗೂ ಅದು ಈ ಕೆಳಗೆ ಹೆಸರಿಸಿದ ಸಲಕರಣೆಗಳನ್ನು ಹೊಂದಿರಬೇಕು:–

ಬಿ) 50ನ್ನು ಮೀರದ ಸಿಬ್ಬಂದಿಗಳಿರುವ ಒಂದು ಕಾರ್ಯಕ್ಷೇತ್ರಕ್ಕೆ ಪ್ರತೀ ಪ್ರಥಮ ಚಿಕಿತ್ಸೆ ಪೆಟ್ಟಿಗೆಯು ಈ ಕೆಳಗಿನ ಸಲಕರಣೆಗಳನ್ನು ಒಳಗೊಂಡಿರಬೇಕು:–

1. 6 ಚಿಕ್ಕ ಗಾತ್ರದ ಕ್ರಿಮಿರಹಿತವಾಗಿಸಿದ ಗಾಯದ ಹತ್ತಿ ಪಟ್ಟಿಗಳು.
2. 3 ಮಧ್ಯಮ ಗಾತ್ರದ ಕ್ರಿಮಿರಹಿತವಾಗಿಸಿದ ಗಾಯದ ಹತ್ತಿ ಪಟ್ಟಿಗಳು.
3. 3 ದೊಡ್ಡ ಗಾತ್ರದ ಕ್ರಿಮಿರಹಿತವಾಗಿಸಿದ ಗಾಯದ ಹತ್ತಿ ಪಟ್ಟಿಗಳು.
4. 3 ದೊಡ್ಡ ಗಾತ್ರದ ಕ್ರಿಮಿರಹಿತವಾಗಿಸಿದ ಸುಟ್ಟಗಾಯದ ಹತ್ತಿ ಪಟ್ಟಿಗಳು.
5. 2 % ಮದ್ಯಸಾರ ದ್ರಾವಣ ಅಯೋಡಿನ್ ಉಳ್ಳ 1 (30 ಮಿಲೀ) ಬಾಟಲಿ.
6. ಔಷಧದ ಪ್ರಮಾಣ ಮತ್ತು ನೀಡಿಕೆಯ ಮಾಹಿತಿಯಿಂದ ಕೂಡಿದ ಲೇಬಲ್ ಉಳ್ಳ ಸಾಲ್‌ವೋಲಟೈಲ್‌ನ (30ಮಿಲೀ) ಬಾಟಲಿ.
7. 1 ಹಾವು ಕಡಿತದ ಲ್ಯಾಂಸರ್.
8. ಪೊಟ್ಯಾಸಿಯಮ್ ಪರ್ಮಾಂಗನೇಟ್‌ನ ಹರಳುಗಳುಳ್ಳ ಒಂದು (30 ಗ್ರಾಮ್) ಬಾಟಲಿ.
9. 1 ಜೊತೆ ಕತ್ತರಿ.

10. ಪ್ರಧಾನ ನಿರ್ದೇಶಕರು, ಕಾರ್ಖಾನೆಗಳ ಸಲಹಾ ಸೇವೆ ಮತ್ತು ಕಾರ್ಮಿಕ ಸಂಸ್ಥೆ, ಭಾರತ ಸರಕಾರ, ಹೊರಡಿಸಿದ ಪ್ರಥಮ–ಚಿಕಿತ್ಸೆ ಪುಸ್ತಕದ ಒಂದು ಪ್ರತಿ.

11. ಆಸ್ಪಿರಿನ್‌ನ 100 ಮಾತ್ರೆಗಳನ್ನು (ಪ್ರತಿಯೊಂದು 5 ಗ್ರಾಮ್) ಹೊಂದಿರುವ 1 ಬಾಟಲಿ.

12. ಸುಟ್ಟಗಾಯಕ್ಕೆ ಮುಲಾಮು.

13. ಸೂಕ್ತ ಸರ್ಜಿಕಲ್ ಆಂಟಿಸೆಪ್ಟಿಕ್ ದ್ರಾವಣ ಉಳ್ಳ ಒಂದು ಬಾಟಲಿ.

ಬಿ). ಸಿಬ್ಬಂದಿಯ ಸಂಖ್ಯೆ 50ನ್ನು ಮೀರಿರುವ ಒಂದು ಕಾರ್ಯಕ್ಷೇತ್ರಕ್ಕೆ ಪ್ರತೀ ಪ್ರಥಮ ಚಿಕಿತ್ಸೆ ಪೆಟ್ಟಿಗೆಯು ಈ ಕೆಳಗಿನ ಸಲಕರಣೆಗಳನ್ನು ಹೊಂದಿರಬೇಕು:–

1. 12 ಚಿಕ್ಕ ಗಾತ್ರದ ಕ್ರಿಮಿರಹಿತವಾಗಿಸಿದ ಗಾಯದ ಹತ್ತಿ ಪಟ್ಟಿಗಳು.

2. 6 ಮಧ್ಯಮ ಗಾತ್ರದ ಕ್ರಿಮಿರಹಿತವಾಗಿಸಿದ ಗಾಯದ ಹತ್ತಿ ಪಟ್ಟಿಗಳು.

3. 6 ದೊಡ್ಡ ಗಾತ್ರದ ಕ್ರಿಮಿರಹಿತವಾಗಿಸಿದ ಗಾಯದ ಹತ್ತಿ ಪಟ್ಟಿಗಳು.

4. 6 ದೊಡ್ಡ ಕ್ರಿಮಿರಹಿತವಾಗಿಸಿದ ಸುಟ್ಟಗಾಯದ ಹತ್ತಿ ಪಟ್ಟಿಗಳು.

5. 6 (1ಗ್ರಾಮ್) ಪ್ಯಾಕ್ ಮಾಡಿದ ಕ್ರಿಮಿರಹಿತವಾಗಿಸಿದ ಗಾಯದ ಹತ್ತಿ ಉಂಡೆಗಳು (ಕಾಟನ್ ವುಲ್).

6. 2% ಮದ್ಯಸಾರ ದ್ರಾವಣ ಅಯೋಡಿನ್ ಉಳ್ಳ ಒಂದು 1 (60 ಮಿಲೀ) ಬಾಟಲಿ.

7. ಔಷದದ ಪ್ರಮಾಣ ಮತ್ತು ನೀಡಿಕೆಯ ಮಾಹಿತಿಯಿಂದ ಕೂಡಿದ ಲೇಬಲ್ ಉಳ್ಳ ಸಾಲ್‌ವೋಲಟೈಲ್‌ನ 1 (60 ಮಿಲೀ) ಬಾಟಲಿ.

8. ಅಂಟು ಪ್ಲಾಸ್ಟರ್‌ನ ಒಂದು ಸುರುಳಿ.

9. 1 ಹಾವುಕಡಿತದ ಲ್ಯಾನ್ಸರ್.

10. ಪೊಟ್ಯಾಸಿಯಮ್ ಪರ್ಮಾಂಗನೇಟ್‌ನ ಹರಳುಗಳುಳ್ಳ 1(30 ಗ್ರಾಮ್) ಬಾಟಲಿ.

11. 1 ಜೊತೆ ಕತ್ತರಿ.

12. ಪ್ರಧಾನ ನಿರ್ದೇಶಕರು, ಕಾಖಾನೆಗಳ ಸಲಹಾ ಸೇವೆ ಮತ್ತು ಕಾರ್ಮಿಕ ಸಂಸ್ಥೆ, ಭಾರತ ಸರಕಾರ ಹೊರಡಿಸಿದ ಪ್ರಥಮ–ಚಿಕಿತ್ಸೆ ಪುಸ್ತಕದ ಒಂದು ಪ್ರತಿ.

13. ಆಸ್ಪಿರಿನ್‌ನ 100 ಮಾತ್ರೆಗಳನ್ನು(ಪ್ರತಿಯೊಂದು 5 ಗ್ರಾಮ್) ಹೊಂದಿರುವ 1 ಬಾಟಲಿ.

14. ಸುಟ್ಟಗಾಯಕ್ಕೆ ಮುಲಾಮು.

ಇನ15. ಸೂಕ್ತ ಆಂಟಿಸೆಪ್ಟಿಕ್ ದ್ರಾವಣ ಉಳ್ಳ ಒಂದು ಬಾಟಲಿ.

(ಎ) ಅಗತ್ಯಬಿದ್ದಾಗ ಸಲಕರಣೆಗಳ ತಕ್ಷಣದ ಮರುಭರ್ತಿಗಾಗಿ ಸೂಕ್ತವಾದ ವ್ಯವಸ್ಥೆಯನ್ನು ಮಾಡಬೇಕು.

(ಬಿ) ಕಾರ್ಯಕ್ಷೇತ್ರದ ಕೆಲಸದ ವೇಳೆಗಳಲ್ಲಿ ಯಾವಾಗಲೂ ಸ್ಥಳದಲ್ಲಿ ಲಭ್ಯವಿರುವ ಒಬ್ಬ ಜವಾಬ್ದಾರಿಯುತ ವ್ಯಕ್ತಿಯ ಸುಪರ್ದಿಯಲ್ಲಿ ಪ್ರಥಮ ಚಿಕಿತ್ಸೆ ಪೆಟ್ಟಿಗೆಯನ್ನು ಇರಿಸಬೇಕು.

(ಸಿ) 150 ಅಥವಾ ಕ್ಕೂ ಅಧಿಕ ಸಿಬ್ಬಂದಿಗಳಿರುವ ಕಾರ್ಯಕ್ಷೇತ್ರದಲ್ಲಿ ಪ್ರಥಮ ಚಿಕಿತ್ಸೆ ಪೆಟ್ಟಿಗೆಯ ಸುಪರ್ಧಿಯನ್ನು ಹೊಂದಿದ ವ್ಯಕ್ತಿಯು ಪ್ರಥಮ ಚಿಕಿತ್ಸೆಯಲ್ಲಿ ತರಬೇತಿ ಹೊಂದಿದವರಾಗಿರಬೇಕು.

(ಡಿ) 500 ಅಥವಾ ಅದಕ್ಕಿಂತಲೂ ಹೆಚ್ಚಿನ ಸಿಬ್ಬಂದಿಗಳ ಸಂಖ್ಯೆಯನ್ನು ಹೊಂದಿರುವ ಕಾರ್ಯಕ್ಷೇತ್ರಗಳಲ್ಲಿ ಹಾಗೂ ಕಾರ್ಯಕ್ಷೇತ್ರದ ಸನಿಹದಲ್ಲೆಲ್ಲೂ ಆಸ್ಪತ್ರೆಯ ಸೌಲಭ್ಯಗಳು ಸಿಗದಿದ್ದ ಕಡೆಗಳಲ್ಲಿ ಪ್ರಥಮ ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸಬೇಕು ಹಾಗೂ ಇದನ್ನು ಒಬ್ಬ ತರಬೇತಿ ಪಡೆದ ಕಂಪೌಂಡರ್ ನಡೆಸಬೇಕು ಹಾಗೂ ನೌಕರರು ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಮಯದಲ್ಲೂ ಅವರು ಕರ್ತವ್ಯ ನಿರ್ವಹಿಸಲು ಸ್ಥಳದಲ್ಲಿರಬೇಕು.

(ಇ) ಕಾರ್ಯಕ್ಷೇತ್ರಗಳು ಪಟ್ಟಣ ಅಥವಾ ನಗರವಲ್ಲದ ಸ್ಥಳಗಳಲ್ಲಿ ಸ್ಥಾಪಿತವಾಗಿದ್ದರೆ, ಗಾಯಗೊಂಡ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ಹತ್ತಿರದ ಆಸ್ಪತ್ರೆಗಳಿಗೆ ತ್ವರಿತವಾಗಿ ಕರೆದೊಯ್ಯಲು ಒಂದು ಸಾಗಣೆ ವಾಹನವನ್ನು ಸಿದ್ಧವಾಗಿರಿಸಿಕೊಳ್ಳಬೇಕು.

(ಎಫ್) ಪರಿಚ್ಛೇದ ಎ ಹಾಗೂ ಬಿಯಲ್ಲಿ ಸೂಚಿಸಿದಂತೆ ಪ್ರಥಮ ಚಿಕಿತ್ಸೆ ಪೆಟ್ಟಿಗೆಯು ಇತರ ಯಾವುದೇ ಸಲಕರಣೆ ಅಥವಾ ವಸ್ತುಗಳನ್ನು ಹೊಂದಿರುವಂತಿಲ್ಲ.